**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ


**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |

ಸಂಪುಟ : 7 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2017


## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ ನಮಸ್ಕಾರ.

ತಮಗೂ ತಮ್ಮ ಕುಟುಂಬದ ಸದಸ್ಯರಿಗೆಲ್ಲಾ 'ಹೇವಿಳಂಬಿ' ಸಂವತ್ಸರದ ಯುಗಾದಿ, ಶ್ರೀರಾಮನವಮಿ ಹಾಗೂ ಶ್ರೀ ಶಂಕರ ಜಯಂತಿಯು ಶುಭ ತರಲೆಂದು ಕಾರ್ಯಕಾರಿ ಸಮಿತಿಯ ಪರವಾಗಿ ಹಾರೈಸುತ್ತೇನೆ. ತಾ. 2.3.2017ರಂದು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ನಡೆದ ನಾಗಾರಾಧನೆ, ಶ್ರೀ ಶ್ರೀನಿವಾಸ ರಥೋತ್ಸವ ದೇವತಾ ಕಾರ್ಯಗಳಲ್ಲಿ ಪಾಲ್ಗೊಂಡು ಸಂಘದ ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ನಮ್ಮವರಿಗೆಲ್ಲಾ ಧನ್ಯವಾದಗಳು.



### ನಮ್ಮ ನಮನ

ಪೂಜ್ಯ ಡಿ.ವಿ.ಜಿ. ಅವರ 130ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ 'ಬೃಹಚ್ಚರಣ' ಸಂಘದ ಸದಸ್ಯರೆಲ್ಲರೂ ಡಿ.ವಿ.ಜಿ.ಯವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತಾ, ಅವರ ಕುಟುಂಬ ಸದಸ್ಯರಿಗೆಲ್ಲಾ ಶುಭ ಕೋರುತ್ತದೆ. ಡಿ.ವಿ.ಜಿ.ಯವರ ಹುಟ್ಟುಹಬ್ಬವನ್ನು ರಾಜ್ಯಾದ್ಯಂತ ಕವಿಗಳು, ಸಾಹಿತಿಗಳು, ಸಂಘ ಸಂಸ್ಥೆಗಳು ನಡೆಸುತ್ತಿರುವುದು ನಮಗೆ ಹೆಮ್ಮೆಯ ವಿಷಯ. 'ಬೃಹಚ್ಚರಣ' ಪತ್ರಿಕೆಯು ಪ್ರಥಮ ಸಂಚಿಕೆಯನ್ನು 'ಡಿವಿಜಿ' ಯವರಿಗೆ ಅರ್ಪಿಸಿತ್ತು. ಸಂಘದ ಸದಸ್ಯರಾದ ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿಯವರು ಆಯ್ದ 'ಮಂಕುತಿಮ್ಮನ ಕಗ್ಗ'ಕ್ಕೆ ತಾತ್ಪರ್ಯ, ಭಾವಾರ್ಥಗಳನ್ನು 'ಬೃಹಚ್ಚರಣ' ಸಂಚಿಕೆಗಳಿಗೆ ಬರೆಯುತ್ತಿದ್ದಾರೆ. ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿಯವರು ಡಿ.ವಿ.ಜಿ.ಯವರ ಕುರಿತು ಹಲವಾರು ಪುಸ್ತಕಗಳನ್ನು ಹೊರತಂದಿದ್ದಾರೆ. ಡಿ.ವಿ.ಜಿ. ಕುಟುಂಬದ ಶ್ರೀ ಆರ್.ಸಿ. ಚಂದ್ರಮೌಳಿಯವರು ಉತ್ತಿಷ್ಠ ಭಾರತ ಬಳಗದ ಮೂಲಕ ಡಿವಿಜಿಯವರ ಕಗ್ಗವನ್ನು 'ದಿನಕ್ಕೊಂದು ಕಗ್ಗ' ಎಂದು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಕಟಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ.

ಕೇಂದ್ರ ಸರ್ಕಾರ ನೀಡುವ 'ಪದ್ಮಭೂಷಣ' ಪ್ರಶಸ್ತಿಗೆ ನಮ್ಮ ಸಮುದಾಯದಲ್ಲಿ ಭಾಜಕರಾಗಿರುವ ಧೀಮಂತ ರಸಋಷಿ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರಿಗೆ ಮತ್ತೊಮ್ಮೆ ಪ್ರಣಾಮಗಳು.



**ತಮ್ಮವ,**

**■ ಎಸ್. ಸೋಮಸುಂದರ**

## ನಾಗಾರಾಧನೆ ವಿಶೇಷಾಂಕ




ಬೃಹಚ್ಚರಣ ಬಂಧುಗಳೆ,

ತಾರೀಖು 02.03.2017 ನೇ ಗುರುವಾರದಂದು ಕಿತ್ತಿಗಾನ ಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ನಡೆದ ನಾಗಾರಾಧನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮ್ಮೊಡನೆ ಸಹಕರಿಸಿದ ಎಲ್ಲ ಸಮುದಾಯದ ಬಂಧುಗಳಿಗೆ ಅನಂತಾನಂತ ಧನ್ಯವಾದಗಳು.

ಈ ಸಂದರ್ಭದಲ್ಲಿ ತಾವು ಸಂಘಕ್ಕೆ ಉದಾರವಾಗಿ ನೀಡಿದ ದೇಣಿಗೆಗಾಗಿ ಮತ್ತೊಮ್ಮೆ ಧನ್ಯವಾದಗಳು. ತಮ್ಮೆಲ್ಲರ ಸಲಹೆ, ಸಹಕಾರ, ಪ್ರೋತ್ಸಾಹ ಇದೇ ರೀತಿ ಮುಂದುವರೆಯಲಿ. ಸಂಘದ ಕಾರ್ಯಗಳಿಗೆ ಅಮೂಲ್ಯವಾದ ದೇಣಿಗೆ ನೀಡಬಯಸುವ ಸಹೃದಯಿಗಳು

**ಕೆನರಾ ಬ್ಯಾಂಕ್, ಚಂದಾಪುರ,** SB No. 1065101119457 (IFSC: CNRB 0001065) ಅಥವಾ **ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್** 00243100013234, IFSC: UTIBOSNCB01 **ಬಸವನಗುಡಿ ಶಾಖೆಗೆ** ದೇಣಿಗೆ ಸಲ್ಲಿಸಬಹುದು.



**ವಿ.ಎಸ್. ಮಣಿ**

ಕಾರ್ಯದರ್ಶಿ, ಎಂ.ಎಂ.ಡಿ.ಬಿ.ಎಸ್.

### ಸಂಘಕ್ಕೆ ಹೊಸ ಸೇರ್ಪಡೆ

| | |
|---|---|
| ಶ್ರೀನಿವಾಸ ಮೂರ್ತಿ ಬಿ.ಪಿ. (ಪೋಷಕರು) | 5,000/– |
| ರಂಜನಿ ದತ್ತ (ಸದಸ್ಯರು) | 1,000/– |
| ಡಾ. ಬಿ.ಪಿ.ಎಸ್. ಮೂರ್ತಿ (ಸದಸ್ಯರು) | 1,000/– |
| ರವಿ ಸರ್ಜಾಪುರ (ಸದಸ್ಯರು) | 1,000/– |
| ವೈ.ಆರ್. ಗಣಪತಿ (ಸದಸ್ಯರು) | 1,000/– |

## ಮೈ.ಮಂ.ದ್ರಾ.ಬ್ರೈ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶನ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ್ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಬಿ.ಎನ್.ಜಿ. ಪ್ರಸಾದ್, 9845128229** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

**ನಿಮ್ಮೊಡನೆ....**

ಬೃಹಚ್ಚರಣ ಸಂಘವು ಸಮುದಾಯದವರೆಲ್ಲಾ ಭಾಗವಹಿಸುವಂತೆ ಪ್ರತೀ ವರ್ಷವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲಾ ತಿಳಿದ ವಿಷಯ. ಮೂರು ಬಾರಿ ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವ, ಶಿಕ್ಷಕರ ದಿನಾಚರಣೆ ಅಂಗವಾಗಿ ಗುರು ವಂದನಾ ಕಾರ್ಯಕ್ರಮ ಹಾಗೂ 2017 ನಾಗಾರಾಧನೆಯ ಛಾಯಾಚಿತ್ರ, ವಿಡಿಯೋಗಳನ್ನು ಸಂಘವು ಬಿಡುಗಡೆ ಮಾಡಿದ್ದು ನಮ್ಮ ಸಮುದಾಯದ ಸದಸ್ಯರೆಲ್ಲಾ ಮೆಚ್ಚುಗೆ ವ್ಯಕ್ತಪಡಿಸಿರುವುದಕ್ಕೆ ಹೆಮ್ಮೆ ಎನಿಸಿದೆ. ಈ ಸಂದರ್ಭದಲ್ಲಿ ಛಾಯಚಿತ್ರಗಳನ್ನು ಒದಗಿಸಿದ ಸಂಘದ ಸದಸ್ಯರಾದ ಶ್ರೀ ಕೆ.ಸಿ.ನಟರಾಜ್‌ರವರಿಗೆ, ಛಾಯಚಿತ್ರಗಳನ್ನು ಸಂಸ್ಕರಿಸಿ ವಿಡಿಯೋ ಮಾಡಿದ ಶ್ರೀ ಎನ್.ಶಿವಕುಮಾರ್‌ರವರಿಗೆ, ಹಿನ್ನಲೆ ಸಂಗೀತ ಒದಗಿಸಿರುವ ವಿದ್ವಾನ್ ಬಿ.ಎ.ದಕ್ಷಿಣಾಮೂರ್ತಿರವರಿಗೆ ಸಂಘದ ಧನ್ಯವಾದಗಳು.

**ಸೋಮಸುಂದರ,** ಅಧ್ಯಕ್ಷರು



**ಮೈಸೂರು ಮಹಾರಾಜ ಜಯಚಾಮರಾಜ ಒಡೆಯರಿಂದ ಮೈಸೂರು ವಿ.ವಿ.ಯ ಡಾಕ್ಟರೇಟ್ ಸ್ವೀಕರಿಸುತ್ತಿರುವ ಡಿ.ವಿ.ಜಿ.**

## ಡಿವಿಜಿಯವರ ಜೀವನದ ಪ್ರಮುಖ ನೆನಪುಗಳು

| | |
|---|---|
| 7–3–1887 | ಡಿವಿಜಿಯವರ ಜನನ. ದೇವನಹಳ್ಳಿ ಅಲಮೇಲಮ್ಮ ವೆಂಕಟರಮಣಯ್ಯ ದಂಪತಿಗಳ ಮೊದಲನೆ ಪುತ್ರ. |
| 1889 | ಕನ್ನಡ ಲೋಯರ್ ಸೆಕೆಂಡರಿ ತೇರ್ಗಡೆ |
| 1901 | ಇಂಗ್ಲಿಷ್ ಲೋಯರ್ ಸೆಕೆಂಡರಿ |
| 1902 | ಮೈಸೂರಿನಲ್ಲಿ ಪ್ರೌಢಶಾಲೆ ವ್ಯಾಸಂಗ |
| 1903 | ಕೋಲಾರದಲ್ಲಿ ಮೆಟ್ರಿಕ್ಯುಲೇಷನ್ |
| 1904 | ಶ್ರೀಮತಿ ಭಾಗೀರಥಮ್ಮನವರೊಡನೆ ವಿವಾಹ. |
| 1905 | ಕಬ್ಬಿಣದ ಅಂಗಡಿಯಲ್ಲಿ ಗುಮಾಸ್ತೆ, ಕೆ.ಜಿ.ಎಫ್. |
| 1906 | ಪತ್ರಿಕೋದ್ಯಮ ಬೆಂಗಳೂರಿನಲ್ಲಿ |
| 1907 | ಭಾರತಿ ಪತ್ರಿಕೆಯ ಸಂಪಾದಕ |
| 1908 | ಮೈಸೂರು ಪತ್ರಿಕಾ ಶಾಸನವನ್ನು ವಿರೋಧಿಸಿ ಮದ್ರಾಸಿನಲ್ಲಿ ಪುಸ್ತಕ ಪ್ರಕಟಣೆ |
| 1909 | 'ಸುಮತಿ ಪತ್ರಿಕೆ' |
| 1911 | ದಿವಾನ್ ರಂಗಾಚಾರ್ಲು ಪುಸ್ತಕ ಬರಹ. |
| 1911 | ಸಂಪಾದಕ, ಮೈಸೂರು ಟೈಂಸ್ |
| 1912 | ಬೆಂಗಳೂರು ನಗರಸಭಾ ಸದಸ್ಯ. |
| | 1912–1926ರವರೆಗೆ 'ಕರ್ನಾಟಕ' ಇಂಗ್ಲಿಷ್ ಪತ್ರಿಕೆ ನಡೆಸಿದ್ದು. |
| 1921–22 | 25–26 ಇಂಡಿಯನ್ ರೀವ್ಯೂ ಆಫ್ ರೀವ್ಯೂಸ್ ಪತ್ರಿಕೆ. |
| 1923 | ಸಂಪಾದಕ ಕರ್ನಾಟಕ ಜನಜೀವನ 'ಅರ್ಥಸಾಧಕ' ಪತ್ರಿಕೆ. |
| 1926–40 | ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯ. |
| 1927–43 | ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ. |
| 1928 | ಪ್ರಥಮ ಕರ್ನಾಟಕ ಪತ್ರಕರ್ತರ ಸಂಘ ಸಮ್ಮೇಳನದ ಅಧ್ಯಕ್ಷ, ಬಾಗಲಕೋಟೆ |
| 1932 | ಅಧ್ಯಕ್ಷತೆ, ಕನ್ನಡ ಸಾಹಿತ್ಯ ಸಮ್ಮೇಳನ, ಮಡಕೇರಿ. |
| 1932–34 | ಮೈಸೂರು ಪತ್ರಕರ್ತ ಸಂಘದ ಸ್ಥಾಪಕ ಅಧ್ಯಕ್ಷ. |
| 1933–34 | ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ. |
| 1939 | ರಾಜ್ಯಾಂಗ ಸುಧಾರಣಾ ಸಮಿತಿ ಅಧ್ಯಕ್ಷ. |
| 1943 | 'ಮಂಕುತಿಮ್ಮನ ಕಗ್ಗ' ಪ್ರಕಟಣೆ |
| 1945 | ಗೋಖಲೆ ಸಾರ್ವಜನಿಕ ಸಂಸ್ಥೆ ಸ್ಥಾಪನೆ |
| 1949 | 'ಪಬ್ಲಿಕ್ ಅಫೇರ್ಸ್' ಪತ್ರಿಕೆ ಆರಂಭ. |
| 1961 | ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ |
| 1967 | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ('ಜೀವನ ಧರ್ಮ ಯೋಗ' ಕೃತಿಗಾಗಿ) |
| 1970 | ಸಾರ್ವಜನಿಕ ಸನ್ಮಾನ, ಬೆಂಗಳೂರು ಪುರಭವನದಲ್ಲಿ ಗೌರವಿಸಿ ನೀಡಿದ 1 ಲಕ್ಷ ರೂಪಾಯಿಗಳನ್ನು ಗೋಖಲೆ ಸಾರ್ವಜನಿಕ ಸಂಸ್ಥೆಗೆ ಸ್ಥಳದಲ್ಲೇ ದೇಣಿಗೆ ನೀಡಿದರು. |
| 1974 | ಕೇಂದ್ರ ಸರ್ಕಾರದ ಪದ್ಮಭೂಷಣ ಪ್ರಶಸ್ತಿ. |
| 7.10.1975 | ನಮ್ಮನ್ನಗಲಿದ ಮಹಾಮಹಿಮ |
| 17.3.1988 | ಕೇಂದ್ರ ಸರ್ಕಾರದಿಂದ ನೂರನೇ ವರ್ಷದ ಹುಟ್ಟು ಹಬ್ಬಕ್ಕಾಗಿ ಗೌರವಗಳೊಂದಿಗೆ 60 ಪೈಸೆಯ ಅಂಚೆ ಚೀಟಿ ಬಿಡುಗಡೆ. |



# ಕಿತ್ತಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆ, 2017

ಚಿತ್ರಕೃಪೆ : ಶಿವಕುಮಾರ್ ಎನ್.

















# ಕಿತ್ತಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆ, 2017














# ಕಿತ್ತಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆ, 2017





















# ವಿವಿಧ ಪ್ರದೇಶಗಳ ನಾಗಾರಾಧನೆಯ ವಿಶಿಷ್ಟ ಆಚರಣೆ

ನಮ್ಮ ಹಿಂದೂ ಜೋತಿಷ್ಯ ಶಾಸ್ತ್ರದ ಪ್ರಕಾರ ಜಾತಕದ ಕುಂಡಲಿಯಲ್ಲಿ ರಾಹು, ಕೇತು, ಕುಜ ಗ್ರಹಗಳು ಒಂದಕ್ಕೊಂದು ಸಂಬಂಧ ಬಂದಾಗ ಅದು ಸರ್ಪ ದೋಷವಾಗುತ್ತದೆ. ಇದು ನಮ್ಮ ಪ್ರಾಚೀನ ಮಹರ್ಷಿಗಳಾದ ಪರಾಶರ, ವರಾಹಮಿಹಿರ ಮುಂತಾದವರು ಉಲ್ಲೇಖಿಸಿರುವ ವಿಚಾರ. ಸರ್ಪದೋಷ, ಕಾಳಸರ್ಪದೋಷಗಳಿಂದ ಧನಹಾನಿ, ವಿವಾಹ ವಿಳಂಬ, ಸಂತಾನದೋಷ, ಚರ್ಮರೋಗ, ಆಸ್ತಿ ವಿವಾದ, ಜಗಳ, ಆಕಸ್ಮಿಕಗಳು ಸಂಭವಿಸುವ ಸಾಧ್ಯತೆ ಇದೆ. ಹೀಗೆಂದು ದೋಷ ಇರುವವರು ಭಯಭೀತ ರಾಗುವ ಅವಶ್ಯಕತೆ ಇಲ್ಲ, ಪರಿಹಾರಕ್ಕಾಗಿ ನಾಗರ ಪ್ರತಿಷ್ಠೆ, ಸರ್ಪಶಾಂತಿ, ಆಶ್ಲೇಷ ಬಲಿ, ಕಾಳಸರ್ಪಶಾಂತಿ ಮಾಡಿಸಿ ಈ ಮೂಲಕ ದೋಷ ನಿವಾರಿಸಿಕೊಳ್ಳಬಹುದು. ಈ ಮೇಲ್ಕಂಡ ಪೂಜೆಗಳನ್ನು ಮಾಡಿಸುವುದರಿಂದ ಅನಿಷ್ಟ ನಿವಾರಣೆಯಾಗಿ ಉತ್ತರೋತ್ತರ ಅಭಿವೃದ್ಧಿಯಾಗಿ ಶಾಂತಿ, ನೆಮ್ಮದಿ, ಸೌಖ್ಯ, ಸುಖ, ಸತ್ಸಂತಾನ, ಮಹೋನ್ನತ ಅಧಿಕಾರ ಪ್ರಾಪ್ತಿ ಎಲ್ಲವನ್ನು ಜೀವನದಲ್ಲಿ ಪಡೆಯಬಹುದು. ಈ ನಿಟ್ಟಿನಲ್ಲಿ ಕರ್ನಾಟಕದ ಕುಕ್ಕೆ ಸುಬ್ರಹ್ಮಣ್ಯ, ಘಾಟಿ, ಕಾಳಹಸ್ತಿ, ರಾಮನಾಥಪುರ, ವಿದುರಾಶ್ವತ್ಥ ದೇವಳಗಳು, ನಾಗದೇವರು ಮತ್ತು ರುದ್ರರೂಪಿ ಈಶ್ವರನನ್ನು ಆರಾಧಿಸುವ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಈ ನಾಗಾರಾಧನೆಯು ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಹಾರಾಷ್ಟ್ರ, ಬೆಳಗಾವಿ ಹೀಗೆ ವಿವಿಧ ಪ್ರದೇಶಗಳಲ್ಲಿ ಅವರದೇ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಕೆಲವರು ಹುತ್ತಕ್ಕೆ ಹಾಲೆರೆಯುತ್ತಾರೆ. ದಕ್ಷಿಣ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಲ್ಲ ಕುಟುಂಬದವರಿಗೂ ಅವರದೇ ಆದ ನಾಗಬಿನಗಳು, ಪ್ರತಿಷ್ಟಾಪಿಸಿರುವ ನಾಗರಕಲ್ಲುಗಳು, ಮೂರ್ತಿಗಳು ಇರುತ್ತವೆ. ಮನೆಯ ಹಿರಿಯರಾದ ಗಂಡಸರು ನಿತ್ಯ ನಾಗಪ್ಪನಿಗೆ ಹಾಲು, ಎಳನೀರಿನ ಅಭಿಷೇಕ, ಗಂಧ, ಹೂವಿನಿಂದ ಪೂಜಿಸುತ್ತಾರೆ. ನಾಗರಪಂಚಮಿ ದಿನ ಕೂಡ ಈ ನಾಗರಮೂರ್ತಿಯನ್ನು ಆರಾಧಿಸುತ್ತಾರೆ. ಆದರೆ ಹೆಂಗಸರು ಯಾರೂ ಕೂಡ ನಾಗರಿಗೆ ತನಿ ಎರೆಯುವುದಾಗಲೀ, ಮುಟ್ಟುವುದಾಗಲಿ ಮಾಡುವುದಿಲ್ಲ. ತುಳುನಾಡ ಬಂಟರೂ ಸಹ ತಮ್ಮ ಕಷ್ಟ ನಷ್ಟಗಳಿಗೆ ನಾಗಾರಾಧನೆ, ನಾಗಮಂಡಲಗಳನ್ನು ನಾಗಬನದಲ್ಲಿ ಬ್ರಾಹ್ಮಣ ಪುರೋಹಿತರಿಂದ ಮಾಡಿಸಿ ಈ ಮೂಲಕ ತಮ್ಮ ದೋಷ ಪರಿಹಾರ ಮಾಡಿಸಿಕೊಳ್ಳುತ್ತಾರೆ.

**ನಾಗಮಂಡಲ :** ಇದು ಹೆಣ್ಣು, ಗಂಡು ನಾಗರುಗಳನ್ನು ಆರಾಧಿಸುವ ಒಂದು ದೃಶ್ಯ ಕಾವ್ಯ. ನಾಟಕ ರೂಪದಲ್ಲಿ ನೃತ್ಯದ ಮೂಲಕ ಗಂಡುನಾಗ, ಹೆಣ್ಣನಾಗನನ್ನು ಒಲಿಸಿಕೊಳ್ಳುವ ಪ್ರಯತ್ನ. ಅಲ್ಲಿ ಆರಾಧನೆ, ಸಂಗೀತ, ವಾದ್ಯಗಳ ಸಹಕಾರ ಇರುತ್ತದೆ. ಹಳ್ಳಿಗಳಲ್ಲಿ ದೊಡ್ಡ ಬಯಲಿನಲ್ಲಿ ಚಪ್ಪರ ಹಾಕಿ, ಅಲ್ಲಿ ಏಳು ಹೆಡೆ ನಾಗರ ಚಿತ್ರ ರಚಿಸಿ ಬಣ್ಣಗಳು ತುಂಬಿ, ಹೂವಿನಿಂದ ಅಲಂಕರಿಸುತ್ತಾರೆ. ರಾತ್ರಿಯೆಲ್ಲಾ ಎರಡು ನಾಗನ ಪಾತ್ರಧಾರಿಗಳು ನೃತ್ಯ ಮಾಡುತ್ತಾರೆ. ಆಗ ಅಡಿಕೆ ಹೂವಿನಿಂದ ಪ್ರಶ್ನೆ ಕೇಳಿದವರಿಗೆ ಪರಿಹಾರವನ್ನು ಕೊಡುತ್ತಿರುತ್ತಾರೆ. ನಾಗರ ಚಿತ್ರಕ್ಕೆ ಹೂವಿನ ರಾಶಿಯೇ ಬಂದು ಬೀಳುತ್ತದೆ. ಹೀಗೆ ನೃತ್ಯ ಸಾಗಿ ಬೆಳಕು ಹರಿಯುವಾಗ ನಾಗ ಪಾತ್ರಧಾರಿಗಳ ಮಿಲನ ವಾಗುತ್ತದೆ. ಇಲ್ಲಿ ಪುರೋಹಿತರಿಗೆ ಪಾತ್ರಿಗಳೆಂದು ಕರೆಯುತ್ತಾರೆ. ಅವರಿಗೆ ಈ ಸಮಯದಲ್ಲಿ ಮೈಮೇಲೆ ನಾಗನು ಬಂದು ಪ್ರಶ್ನೆಗೆ ಉತ್ತರ ಹೇಳುವುದುಂಟು. ಸಾಮಾನ್ಯವಾಗಿ ಅಲ್ಲಿನ ಜನರು ಭೂಮಿ, ಆಸ್ತಿ ವಿವಾದಗಳಿಗೆ ನಾಗಮಂಡಲ ಮಾಡುವಲ್ಲಿ ಹರಕೆ ಹೊತ್ತುಕೊಂಡಿರುತ್ತಾರೆ. ಬೆಳಗಾವಿ, ಮಹಾರಾಷ್ಟ್ರ ಪ್ರದೇಶಗಳಲ್ಲಿ ನಾಗರಪಂಚಮಿ ದಿನ ಮಣ್ಣಿನ ನಾಗನನ್ನು ಮಾಡಿ, ಬೆಳಗ್ಗೆ ಪೂಜಿಸಿ ಸಾಯಂಕಾಲದಲ್ಲಿ ಮನೆ ಹೊರಗೆ ಅದನ್ನು ತೋಟದಲ್ಲಿ ವಿಸರ್ಜಿಸುತ್ತಾರೆ. ಹೆಣ್ಣು ಮಕ್ಕಳನ್ನು ಕರೆದು ಮಂಗಳ ದ್ರವ್ಯಗಳಿಂದ ಉಡಿ ತುಂಬಿ ಕಳುಹಿಸಿಕೊಡುತ್ತಾರೆ. (ನಾವು ಗೌರಿ ಹಬ್ಬದಲ್ಲಿ ಹೆಣ್ಣು ಮಕ್ಕಳಿಗೆ ಅರಸಿನ, ಕುಂಕುಮ ಕೊಡುವಂತೆ ಗುಲ್ಬರ್ಗಾ, ಬೆಳಗಾವಿ, ಖಾನಪುರದ ಆ ಕಡೆಯ ತೇರದಾಳ ಎನ್ನುವ ಊರಿನಲ್ಲಿ ನಿಜವಾದ ನಾಗನನ್ನೇ ಪೂಜಿಸಿ ಹಾಲು ಕುಡಿಯಲು ಕೊಡುತ್ತಾರಂತೆ. ನಾಗರಪಂಚಮಿ ದಿನ ಗಂಡಸರು ನಿಜವಾದ ಹಾವನ್ನು ಕತ್ತಿಗೆ ಸುತ್ತಿಕೊಳ್ಳುತ್ತಾ, ಆ ದಿನ ಮಾತ್ರ ಅದು ಯಾರಿಗೂ ಏನೂ ಮಾಡುವದಿಲ್ಲವಂತೆ. ಹೇಗಿದೆ ನಮ್ಮ ನಾಗನ ಮಹಿಮೆ? ನನಗೆ ತಿಳಿದ ಮಟ್ಟಿಗೆ ನಾಗರಾಧನೆಯ ಆಚರಣೆ, ಪೂಜೆ, ಹರಕೆ ತಿಳಿಸಿ ಕೊಟ್ಟಿದ್ದೇನೆ. ಲೋಪ ದೋಷಗಳಿದ್ದಲ್ಲಿ ಗುರು ಹಿರಿಯರ ಕ್ಷಮೆ ಇರಲಿ.



✍ **ಗಾಯತ್ರಿ ಶೇಷಾಚಲ**
9449730073

# ನಾಗಾರಾಧನೆ – 2017

ಆನೇಕಲ್ ತಾಲ್ಲೂಕು ಕಿತ್ತಿಗಾನಹಳ್ಳಿ ಕ್ಷೇತ್ರದ ನಾಗಾರಾಧನೆಯಲ್ಲಿ ದಿನಾಂಕ 2.3.2017 ಗುರುವಾರದಂದು ಬೃಹಚ್ಚರಣ ಸಮುದಾಯ ದವರು ಭಕ್ತಿಭಾವದಿಂದ ನೆರೆದು, ತನಿ ಎರೆದು ಕೊಂಡಾಡಿದರು. ಬೆಳಗ್ಗೆ 8 ಗಂಟೆಗೇ ನಮ್ಮವರು ನಾಗರಕಟ್ಟೆಯತ್ತ ಬಂದು ಗಣಪತಿಯನ್ನು ಪೂಜಿಸಿ, ನಾಗಪ್ಪನಿಗೆ ನೀರು, ಹಾಲು ಹಾಕಿ ಷೋಡಶೋಪಚಾರದೊಂದಿಗೆ ಪೂಜಿಸಿದರು. ಕುಟುಂಬ ಸಮೇತ ಅರಿಶಿನ, ಕುಂಕುಮ, ಹೂವು, ಗಂಧಾಕ್ಷತೆ, ಪುಷ್ಪಗಳಿಂದ ಅರ್ಚಿಸಿದರು. ಬ್ರಹ್ಮಚಾರಿಗಳಿಗೆ ಕಾಲು ತೊಳೆದು, ಪೂಜಿಸಿ, ಪಂಚೆ, ಶಲ್ಯ, ತಾಂಬೂಲದೊಂದಿಗೆ ದಕ್ಷಿಣೆ ಕೊಟ್ಟು ನಮಸ್ಕರಿಸಿ ಸುಬ್ರಹ್ಮಣ್ಯ ದೇವರನ್ನು ಬ್ರಹ್ಮಚಾರಿಗಳಲ್ಲಿ ಕಂಡು ತೃಪ್ತರಾದರು.

ಬೆಳಗ್ಗೆಯೇ ಭೂನೀಳಾ ಸಮೇತ ಶ್ರೀ ಶ್ರೀನಿವಾಸ, ಗಣಪತಿ, ಗಾಯತ್ರಿ ದೇವಿ, ವಳ್ಳಿದೇವಯಾನಿ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿಗೆ ಅಭಿಷೇಕ ಅಲಂಕಾರ ನಡೆಯಿತು. 11 ಗಂಟೆಯ ಹೊತ್ತಿಗೆ ವಾದ್ಯಮೇಳ, 'ಸುಬ್ಬ ಸುಬ್ಬ ಗೋವಿಂದ, ಸುಬ್ರಹ್ಮಣ್ಯ ಗೋವಿಂದ' ಎಂಬ ಘೋಷ ದೊಂದಿಗೆ ಸುಬ್ರಹ್ಮಣ್ಯ ದೇವರನ್ನು ನಾಗರಕಟ್ಟೆಗೆ ತರಲಾಯಿತು.

ರಾಜಾಪುರದ ಕೃಷ್ಣಮೂರ್ತಿ ಕುಟುಂಬದರು ಪ್ರಸಾದ ರೂಪವಾಗಿ ಕೋಸಂಬರಿ, ಹುಳಿಯವಲಕ್ಕಿ ಮತ್ತು ಪಾನಕ ಹಂಚಿದರು. ಮಹಾ ಮಂಗಳಾರತಿಯ ನಂತರ ಪ್ರಸಾದ ಏರ್ಪಾಡಾಗಿತ್ತು. ರುಚಿಕರ, ಶುಚಿಕರ ಭೋಜನ ತೃಪ್ತಿಯಾಗಿತ್ತು. ಹಿಂದಿನ ವರ್ಷದಂತೆಯೇ ಬಾಣಸಿಗರಿಗೆ ಸಂಘದ ವತಿಯಿಂದ ಪಂಚೆ–ಶಲ್ಯ ವಿತರಿಸಲಾಯಿತು. ಹಿರಿಯ ಸದಸ್ಯ ಟಿ.ಸತ್ಯಮೂರ್ತಿಯವರು 75 ವರ್ಷ ತುಂಬಿದ ಪ್ರಯುಕ್ತ ಸಿಹಿ ಒಬ್ಬಟ್ಟನ್ನು ಸಂತೋಷದಿಂದ ಭಕ್ತಾದಿಗಳಲ್ಲಿ ಹಂಚಿಕೊಂಡರು. ಹೆಸರು ಹೇಳಲು ಇಚ್ಛಿಸದ ಕಾರ್ಯಕಾರಿ ಸಮಿತಿಯ ಸದಸ್ಯರು ಊಟದ ವೇಳೆ ಬಾಳೆಹಣ್ಣು ಹಂಚಿದರು.



ಪ್ರತಿ ವರ್ಷದಂತೆ ಈ ಬಾರಿಯೂ ಶಾಶ್ವತ ಅನ್ನ ಸಂತರ್ಪಣಾ ದಾನಿಗಳ ಹೆಸರಿನಲ್ಲಿ ಸಂಕಲ್ಪ ಮಾಡಿಸಲಾಯಿತು. ಸಂಘದ ವತಿಯಿಂದ ಪ್ರಸಾದವಾಗಿ ವಡೆಗಳನ್ನು ಪ್ಯಾಕ್ ಮಾಡಿಕೊಡಲಾಯಿತು. ಬಂದವರು ಪೂಜಿಸಿ, ಪ್ರಸಾದ ಸೇವಿಸಿ ಸಂಘದ ಪದಾಧಿಕಾರಿಗಳನ್ನು ಶ್ಲಾಘಿಸಿ ತೆರಳಿದರು. ಪದಾಧಿಕಾರಿಗಳು ಎಲ್ಲಾ ನಿಟ್ಟಿನಲ್ಲಿ ಆಸಕ್ತಿ ವಹಿಸಿ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಯಲು ಸಹಕರಿಸಿದರು. ವಿಶೇಷವಾಗಿ ಭಕ್ತಾದಿಗಳ ವಾಹನ ಗಳಿಗಾಗಿ ನಿಲುಗಡೆ ಸೌಲಭ್ಯ ಮಾಡಿದ್ದು ಮತ್ತು ಶಾಮಿಯಾನ ವ್ಯವಸ್ಥೆ ಈ ಬಾರಿ ಹೊಸತನವಾಗಿತ್ತು. ಕಾರ್ಯಕಾರಿ ಸಮಿತಿ ಸಭೆ ಸೇರಿ ಕಾರ್ಯಕ್ರಮ ಸುಸೂತ್ರವಾಗಿ ನಡೆಯಲು ಸಹಕರಿಸಿದ ಕಿತ್ತಿಗಾನಹಳ್ಳಿ ನಿವಾಸಿಗಳಾದ ವಿ.ಎಸ್.ಮಣಿ (ಕಾರ್ಯದರ್ಶಿ), ಎಸ್.ಸತ್ಯನಾರಾಯಣ (ಖಜಾಂಚಿ), ಟಿ.ಎಸ್.ಮಣಿ ಹಾಗೂ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಸಂಘದ ಅಧ್ಯಕ್ಷರು ಅಭಿನಂದಿಸಿದರು. ಸಂಘದ ಎಲ್ಲಾ ಕಾರ್ಯ ಚಟು ವಟಿಕೆಗೆ ಉದಾರ ದೇಣಿಗೆ ನೀಡಿದ ಪ್ರತಿಯೊಬ್ಬರಿಗೂ ಸಂಘ ಆಭಾರಿಯಾಗಿದೆ.



✍ **ಆರ್. ರಮೇಶ್**
9886034048

ನಮ್ಮವರು

# ಕರ್ಮಯೋಗಿ ಶ್ರೀ ಬಿ.ಎಸ್.ಪಿ.



ನಮ್ಮ ಬೃಹಚ್ಚರಣ ಸಮುದಾಯದ ಮೂಲಸ್ಥಳಗಳಲ್ಲೊಂದಾದ ಬಿನ್ನಮಂಗಲದ ಶ್ರೀ ಸೇತುರಾಮಯ್ಯ ಮತ್ತು ಶ್ರೀಮತಿ ಸುಬ್ಬಮ್ಮನವರ ನಾಲ್ಕು ಗಂಡುಮಕ್ಕಳು, ಎರಡು ಹೆಣ್ಣು ಮಕ್ಕಳಲ್ಲಿ ಒಬ್ಬರಾಗಿ ದಿನಾಂಕ 11.1.1927ರಂದು ಶ್ರೀಯುತ ಬಿ.ಎಸ್. ಪದ್ಮನಾಭ್‌ರವರು ಜನಿಸಿದರು. ತಂದೆ ಸೇತುರಾಮಯ್ಯನವರು ವೃತ್ತಿಯಲ್ಲಿ ಶ್ಯಾನುಭೋಗರಾಗಿದ್ದು, ಕುದುರೆ ಸವಾರಿ ಮಾಡುತ್ತಾ ಬರುವಾಗ ಜನ ಅವರನ್ನು 'ನೆಪೋಲಿಯನ್' ಎಂದು ಕರೆಯುತ್ತಿದ್ದರಂತೆ. ತಂದೆಯವರಿಂದ ಶಿಸ್ತುಬದ್ಧತೆ ಕಲಿತಿದ್ದನ್ನು ಬಿ.ಎಸ್.ಪಿ. ನೆನೆಯುತ್ತಾರೆ.

ಪದ್ಮನಾಭ್‌ರವರು 3ನೇ ತರಗತಿಯವರೆಗೆ (6 ಕ್ಲಾಸ್) ಆನೇಕಲ್‌ನಲ್ಲಿ ಅಭ್ಯಸಿಸಿ ಮುಂದೆ ಲೋಯರ್ ಸೆಕೆಂಡರಿಗಾಗಿ ಬೆಂಗಳೂರಿಗೆ ಬಂದರು. ಇದೇ ಸಮಯದಲ್ಲಿ ತಂದೆಯವರ ದೇಹಾಂತವಾಗಿ ವಿದ್ಯಾಭ್ಯಾಸಕ್ಕೆ ಸ್ವಲ್ಪ ತೊಂದರೆಯಾಯಿತು. ವ್ಯವಸಾಯ ಮಾಡಲು ಮನಸ್ಸಿಲ್ಲದೆ ಇದ್ದಾಗ, ತಾಯಿಯವರ ಸೋದರಮಾವ ಶೇಷಗಿರಿರಾಯರ ಸಹಾಯದಿಂದ ವಿದ್ಯಾಭ್ಯಾಸ ಮುಂದುವರೆಸುವಂತಾಯಿತು. ಅಕ್ಕ ಲಲಿತಮ್ಮನವರ ಮನೆಯಲ್ಲಿದ್ದುಓದತೊಡಗಿದರು. 8ನೇ ತರಗತಿಯ ಹೊತ್ತಿಗೆ ಸೋದರಮಾವ ಶ್ರೀನಿವಾಸಯ್ಯನವರ ಮನೆಗೆ ಬಂದರು. ಮುಂದಿನ 3 ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆಯಾಯಿತು. ಇದೇ ಹೊತ್ತಿಗೆ ಸೋದರ ಮಾವನ ಮಗಳು ಇಂದಿರಮ್ಮರವರೊಡನೆ ವಿವಾಹ ನಿಶ್ಚಯವಾಯಿತು. ತಾಯಿ ಮತ್ತು ಪತ್ನಿಯೊಡಗೂಡಿದ ಕುಟುಂಬಕ್ಕೆ ಸಂಪಾದನೆ ಮುಖ್ಯವಾಗಿ ಸಿವಿಲ್ ಸಪ್ಲೈಸ್‌ನಲ್ಲಿ 3 ತಿಂಗಳು, ತಾತ್ಕಾಲಿಕವಾಗಿ ಎಲ್.ಐ.ಸಿ.ಯಲ್ಲಿ 1 ವರ್ಷ ಸೇವೆ ಸಲ್ಲಿಸಿದರು. ನಂತರ ರೂ. 60/– ಸಂಬಳಕ್ಕಾಗಿ ಬಿನ್ನಿ ಮಿಲ್ಸ್‌ನಲ್ಲಿ ಸೇರಿ ಸಂತೋಷ ಜೀವನ ನಡೆಸಿದರು. ಆದರೂ ಮನದಲ್ಲಿದ್ದ ವಿದ್ಯಾಭ್ಯಾಸ ಮುಂದುವರೆಸಬೇಕೆಂಬ ಬಯಕೆ ತೀವ್ರವಾಗಿ ಕೆಲಸಕ್ಕೆ ರಾಜೀನಾಮೆ ನೀಡುವಂತಾಯಿತು.

ವೈ.ಎಂ.ಸಿ.ಎ.ನಲ್ಲಿ ದೈಹಿಕ ಪರೀಕ್ಷೆ ತೇರ್ಗಡೆಯಾಗಿ ಬೆಂಗಳೂರು ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಸೇರಿದರು. ಇಲ್ಲಿಯೇ ಎನ್.ಸಿ.ಸಿ. ತರಬೇತಿಗಾಗಿ ನಾಗಪುರಕ್ಕೆ ವಿದ್ಯಾರ್ಥಿಗಳನ್ನು ಕರೆದೊಯ್ದಿದ್ದಾಗ ಭಾರತದ 'ಬೆಸ್ಟ್ ಎನ್.ಸಿ.ಸಿ. ಆಫೀಸರ್' ಎನಿಸಿದ್ದರು. 1953ರಲ್ಲಿ ಬಿ.ಕಾಂ. ಉತ್ತೀರ್ಣರಾಗಿ 1955ರಲ್ಲಿ ಆಲಿಘರ್ ವಿಶ್ವವಿದ್ಯಾಲಯದಿಂದ ಎಂ.ಕಾಂ. ಪದವಿ, 1956ರಲ್ಲಿ ಬಿ.ಎಡ್. ಪದವಿಯನ್ನು ಪಡೆದರು. ಬೆಂಗಳೂರು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಕೆ. ಶ್ರೀನಿವಾಸ್‌ರವರ ಆಶೀರ್ವಾದವೇ ಇದಕ್ಕೆಲ್ಲಾ ಕಾರಣ ಎಂದು ಪದ್ಮನಾಭ್ ಸ್ಮರಿಸುತ್ತಾರೆ.

ಆಚಾರ್ಯ ಪಾಠಶಾಲೆ ಸಂಜೆ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಉಪಾಧ್ಯಾಯರಾಗಿ ವೃತ್ತಿ ಪ್ರಾರಂಭಿಸಿ, 8 ವರ್ಷ ಸೇವೆಯ ನಂತರ ಅಲ್ಲಿಯೇ ಪ್ರಾಂಶುಪಾಲರಾಗಿದ್ದು ತಮ್ಮ 55ನೇ ವರ್ಷದಲ್ಲಿ 1982ರಲ್ಲಿ ನಿವೃತ್ತಿಯಾದರು. ಮರುದಿನದಿಂದಲೇ ವಾಸವಿ ವಿದ್ಯಾನಿಕೇತನ



ಸಂಸ್ಥೆಯನ್ನು ಸೇರಿ, ಕಾಲೇಜು ವಿಭಾಗ ಪ್ರಾರಂಭಿಸಿದ್ದರಿಂದ ಪ್ರಾಂಶುಪಾಲರಾಗಿ, ನಿರ್ದೇಶಕರಾಗಿ, ಆಡಳಿತಾಧಿಕಾರಿಯಾಗಿ 25 ವರ್ಷಗಳು ವಿವಿಧ ವಿಭಾಗಗಳಲ್ಲಿ ದುಡಿದು, ಈಗ ಸಂಪೂರ್ಣ ನಿವೃತ್ತ ಜೀವನ ನಡೆಸುತ್ತಿದ್ದಾರೆ. ತಮ್ಮ ಏಳಿಗೆಗೆ ಕಾರಣರಾದ ತಮ್ಮ ತಾಯಿ, ಪತ್ನಿ ಮತ್ತು ಸಹೃದಯಿ ಕೆ.ಶ್ರೀನಿವಾಸ್‌ರವರನ್ನು ನೆನೆಯಲೇಬೇಕೆನ್ನುತ್ತಾರೆ.

ಕಾಲೇಜಿನಲ್ಲಿ ಮಾತ್ರವಲ್ಲದೆ ಖಾಸಗಿ ಪಾಠಗಳನ್ನೂ ಉಚಿತವಾಗಿ ವಿದ್ಯಾರ್ಥಿಗಳ ಮೆಚ್ಚಿನ ಬಿ.ಎಸ್.ಪಿ.ರವರು ಬೋಧಿಸುತ್ತಿದ್ದರು. ಇದು ಕೇವಲ ವಿದ್ಯಾರ್ಥಿಗಳಲ್ಲಿದ್ದ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಮಾತ್ರ. ವಿದ್ಯಾಕ್ಷೇತ್ರದಲ್ಲಿದ್ದ ಆಸಕ್ತಿ, ಶ್ರದ್ಧೆಗೆ ಇದು ಸಾಕ್ಷಿ. ಬೆಳಗ್ಗೆ 6.30 ರಿಂದ ರಾತ್ರಿ 9.30ವರೆಗೆ ಸತತವಾಗಿ ವೃತ್ತಿ ಜೀವನದುದ್ದಕ್ಕೂ ಪಾಠ ಮಾಡಿದ್ದಾರೆ. ಅವರಲ್ಲಿದ್ದ ಹುರುಪು ಎಂದೂ ಕುಂದದೇ ಇರುವುದು ಇದರಿಂದ ತಿಳಿಯುತ್ತದೆ. ಯುವಕ ಸಂಘ, ಶಿಕ್ಷಣ ಸಂಸ್ಥೆಗಳಾದ, ಸೇವಾಭಾವವುಳ್ಳ ಉದಯಭಾನು ಕಲಾಸಂಘ ಸಂಸ್ಥೆಗಳಲ್ಲಿ ಬಿ.ಎಸ್.ಪಿ. ಯವರು ಪಾಠ ಮಾಡುತ್ತಿದ್ದರು. ನಿವೃತ್ತರಾಗಿ ತಮ್ಮ ಏಳಿಗೆಗೆ ಮುಖ್ಯ ಕಾರಣರಾಗಿದ್ದ ಪತ್ನಿಯನ್ನು ಕಳೆದುಕೊಂಡು ಎರಡು ಹೆಣ್ಣು, ಎರಡು ಗಂಡು ಮಕ್ಕಳೊಂದಿಗೆ ತೃಪ್ತ ಜೀವನ ನಡೆಸುತ್ತಿರುವ ಬಿ.ಎಸ್.ಪಿ.ಯವರ ಶಿಸ್ತುಬದ್ಧ ಜೀವನಶೈಲಿ, ವಿದ್ಯಾರ್ಥಿಗಳೊಂದಿಗೆ ಒಡನಾಟ, ಆತ್ಮವಿಶ್ವಾಸ ಇವುಗಳು ಅವರ ಆರೋಗ್ಯ, ನೆಮ್ಮದಿಗೆ ಕಾರಣವಾಗಿದೆ. ಪ್ರಾರಂಭದಿಂದಲೂ ಕ್ರೀಡಾಸಕ್ತಿ, ಯುವಜನರಿಗೆ ಪ್ರೋತ್ಸಾಹ ನೀಡುತ್ತಿದ್ದುದರಿಂದ ಶ್ರೀಯುತರಿಗೆ ಹಲವಾರು ಪುರಸ್ಕಾರಗಳು ದೊರಕಿದೆ. ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರಾಗಿದ್ದು, ತಮ್ಮ 91ನೇ ಹುಟ್ಟುಹಬ್ಬದ ಅಂಗವಾಗಿ ನಗರದ ಉದಯಭಾನು ಕಲಾಸಂಘವು ಶ್ರೀಯುತರನ್ನು ಗೌರವಿಸಿತು. ಬೃಹಚ್ಚರಣ ಸಂಘದಿಂದ 'ಗೌರವಶಿಕ್ಷಕ'ರೆಂದು ಗುರುವಂದನಾ ಸಮಾರಂಭದಲ್ಲಿ ಗೌರವಿಸಲ್ಪಟ್ಟಿರುತ್ತಾರೆ.

ಬಿ.ಎಸ್.ಪಿ.ಯವರು ವಿದ್ಯಾಕ್ಷೇತ್ರದಲ್ಲಿ ತಮ್ಮನ್ನು ಇಷ್ಟು ತೊಡಗಿಸಿಕೊಂಡಿದ್ದು ತಾನು ಈವರಗೆ ಪಾಠ ಹೇಳಿದ್ದು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ 'ತಮಗಿರುವ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ' ಎನ್ನುವುದು ಅವರ ಉನ್ನತ ಚಿಂತನೆಗೆ ಉದಾಹರಣೆ. ವಿದ್ಯಾರ್ಥಿಗಳೊಂದಿಗೆ ಪಾಠ ಇಲ್ಲದ ಸಮಯದಲ್ಲಿ ತಮಾಷೆಯಾಗಿ ಮಾತನಾಡುತ್ತಿದ್ದುದು ನೆನೆಯುವಂತಹುದು. ಇತರ ಸಭೆ, ಸಮಾರಂಭಗಳಿಗೆ ಹೋದಾಗಲೂ ಬಿ.ಎಸ್.ಪಿ.ಯವರು ಸಮಯೋಚಿತವಾಗಿ ಮಾತನಾಡುವುದು ಅವರ ಭಾಷಾ ವೈಖರಿಯನ್ನು ತೋರಿಸುತ್ತದೆ.

ಬಿ.ಎಸ್.ಪಿ.ಯವರು ಸಾವಿರಾರು ವಿದ್ಯಾರ್ಥಿಗಳ ಜೀವನದ ಬೆಳಕಾಗಿ ಮುಂದಿನ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ. ನಮ್ಮ ಸಮುದಾಯದಲ್ಲೂ ಹಲವರು ಅವರಲ್ಲಿ ಕಲಿತದ್ದನ್ನು ಎಂದಿಗೂ ಮರೆಯಲಾರರು. ಅವರಿಂದ ವಾಣಿಜ್ಯ ವಿಭಾಗದ ಹಲವು ವಿಷಯಗಳಲ್ಲಿ ವಿಶೇಷವಾಗಿ 'ಅಕೌಂಟೆನ್ಸಿ' ಕಲಿತವಳಲ್ಲಿ ನಾನೂ ಒಬ್ಬಳು. ಅವರು ತರಗತಿಗೆ ಬಂದೊಡನೆ ವಿದ್ಯಾರ್ಥಿಗಳೆಲ್ಲಾ ಶಿಸ್ತಾಗಿ ಕುಳಿತು ಶ್ರದ್ಧೆಯಿಂದ ಕಲಿಯುವಂತೆ ಮಾಡುವ ಕಲೆ ಬಿ.ಎಸ್.ಪಿ.ಯವರಲ್ಲಿ ವಿಶೇಷವಾಗಿತ್ತು. ಅಕೌಂಟೆನ್ಸಿ ತರಗತಿಯಲ್ಲಿ ಪಠ್ಯಪುಸ್ತಕದ 2–3 ಪುಟಗಳು ಇರುತ್ತಿದ್ದ ಲೆಕ್ಕಗಳನ್ನೂ ಪುಸ್ತಕ ನೋಡದೇ

9ನೇ ಪುಟಕ್ಕೆ

ಸಾಧಕರು


# ಕನ್ನಡದ ಧೀಮಂತ ಹೋರಾಟಗಾರ ಎಂ.ವಿ. ಸುಬ್ಬರಾವ್

ಶ್ರೀಯುತ ಎಂ.ವಿ. ಸುಬ್ಬರಾವ್‌ರವರು ಶ್ರೀ ವೆಂಕಟಾದ್ರಿ ಶಾಸ್ತ್ರಿ ಮತ್ತು ಶ್ರೀಮತಿ ಸೀತಾಲಕ್ಷ್ಮಿ ಅವರ ಪುತ್ರ. (ಜನನ 12.04.1924ರಲ್ಲಿ) ಚಿಕ್ಕ ವಯಸ್ಸಿನಿಂದಲೂ ತಂದೆಯವರ ಮೂಲಕ, ನಾಟಕ ಶಿರೋಮಣಿ ಎ.ಜಿ. ವರದಾಚಾರ್ಯರ, ನಾಗೇಂದ್ರರಾಯರ, ನಟ ಭಯಂಕರ ಗಂಗಾಧರರಾಯರ ಹಾಗೂ ಹಲವಾರು ರಂಗಭೂಮಿಯ ಕಲಾವಿದರ ನಿಕಟ ಸಂಪರ್ಕವಿತ್ತು. 12ನೇ ವಯಸ್ಸಿನಲ್ಲಿ ತಾಯಿ ಮತ್ತು 13ನೇ ವಯಸ್ಸಿನಲ್ಲಿ ತಂದೆಯವರನ್ನು ಕಳೆದುಕೊಂಡು, ತನ್ನ ಅಕ್ಕ ವಿಜಯಲಕ್ಷ್ಮಿ ಭಾವನವರಾದ ಎಸ್. ಗುಂಡಪ್ಪ ಅವರ ಮನೆಯಲ್ಲಿ ಬೆಳೆದರು. ಸುಬ್ಬರಾಯರೆಂದರೆ, ಎಲ್ಲರ ಮನಸ್ಸಿನಲ್ಲಿ ಮೂಡುವ ಚಿತ್ರವೆಂದರೆ, ಬಿಳಿಯ ಶರಟು–ಪೈಜಾಮ ತೊಟ್ಟು, ಹೆಗಲ ಮೇಲೆ ಜೋತಾಡುವ ಚೀಲ ನೇತುಹಾಕಿಕೊಂಡು, ಸೈಕಲ್ ಮೇಲೆ ಓಡಾಡುವ ಕನ್ನಡ ಚಳಿವಳಿಗಾರರಾಗಿ.

**ಸಾರ್ವಜನಿಕ ಬದುಕು :** 1938ರಲ್ಲಿ ಮದ್ದೂರಿನ ಬಳಿಯಿರುವ ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿ ಕರೆಗೆ ಓಗೊಟ್ಟು ಸ್ವಾತ್ರಂತ್ಯ ಹೋರಾಟಗಾರರಾಗಿ, ಅನಂತರ, ಗೌರಿಬಿದನೂರು ವಿದುರಾಶ್ವತ್ಥದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ದೇಶದ ತ್ರಿವರ್ಣ ಧ್ವಜ ಹಾರಿಸುವಾಗ ಬ್ರಿಟಿಷರ ಪೊಲೀಸ್ ಫೈರಿಂಗ್‌ನಲ್ಲಿ ಸುಬ್ಬರಾಯರ ಎಡಗಾಲಿನ ಮಂಡಿಯ ಕೆಳಗೆ ಗುಂಡೇಟು ತಗುಲಿತ್ತು. ಅಂದಿನಿಂದ ರಾಜಕೀಯ ಮುಖಂಡರ ಸಂಪರ್ಕ ಹೆಚ್ಚಾಯಿತು. ಈ ಘಟನೆಯು ಮುಂದಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗೆ ನೆರವಾಯಿತು.

1942ರಲ್ಲಿ ಬೆಂಗಳೂರಿನ ರಾಜಾಮಿಲ್‌ನಲ್ಲಿ ಉದ್ಯೋಗ ಮಾಡುತ್ತಿದ್ದ ಸಮಯ. ಅಲ್ಲಿ ಕೆಲಸ ಮಾಡುತ್ತಿದ್ದವರು, ಶೇ. 80ರಷ್ಟು ತಮಿಳಿನವರು. ಅವರು ಕನ್ನಡ ಮಾತಾಡಲು ಒಪ್ಪುತ್ತಿರಲಿಲ್ಲ. ತಮಿಳಿನಲ್ಲೇ ಉತ್ತರಿಸುತ್ತಿದ್ದರು ಆಗ ಸುಬ್ಬರಾಯರು, ಇದು ಕನ್ನಡ ಪ್ರದೇಶ, ಇವರು ಹಲವಾರು ವರ್ಷಗಳಿಂದ ಇಲ್ಲಿನ ಜನರ ಮಧ್ಯದಲ್ಲೇ ಬದುಕು ಸಾಗಿಸುತ್ತಿದ್ದಾರೆ, ಇಲ್ಲಿನ ಅನ್ನ, ನೀರು. ಭೂಮಿ, ಉದ್ಯೋಗ ಅನುಕೂಲಗಳನ್ನು ಉಪಯೋಗಿಸುತ್ತಿದ್ದಾರೆ. ಆದರೂ ಕನ್ನಡ ಕಲಿಯುತ್ತಿಲ್ಲ. ಯಾರ ಹತ್ತಿರ ವಿಚಾರ ವಿಮರ್ಶೆ ಮಾಡಬೇಕೆಂದು ಯೋಚಿಸುತ್ತಿದ್ದರು. ನಮ್ಮ ಕನ್ನಡ ಸಾಹಿತ್ಯದ ಪರಿಚಯ ಮಾಡಿಕೊಳ್ಳಲು ಕನ್ನಡ ಪುಸ್ತಕಗಳನ್ನು ಓದಲು ಪ್ರಾರಂಭಿಸಿದರು.

ಅದೇ ಸಮಯದಲ್ಲಿ ಅ.ನ.ಕೃ.ರವರನ್ನು ಭೇಟಿ ಮಾಡಿ ಅವರೊಂದಿಗೆ ಅನಿಸಿಕೆಗಳನ್ನು ಹಂಚಿಕೊಂಡರು. ಅ.ನ.ಕೃ. ಅವರ ಸ್ನೇಹದಿಂದ ಬಹಳಷ್ಟು ಹಿರಿಯ ಸಾಹಿತಿಗಳು, ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ ಅವರ ಪರಿಚಯವಾಯಿತು. ಕನ್ನಡ ಚಳುವಳಿಗೆ ಅವರೆಲ್ಲರನ್ನೂ ಸೆಳೆದರು. ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆ ಅವರ ಬಾಂಧವ್ಯ ಶುರುವಾಯಿತು. ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಮ್ಮೇಳನದಲ್ಲಿ ಗಮಕ ವಿದ್ಯೆಯನ್ನು ಕಲಿತು ಗಮಕಿಗಳಾದರು. ಈ ಗೀಳು ಮನೆಯವರಿಗೆಲ್ಲಾ ಅಂಟಿಕೊಂಡಿತು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಿ.ಪಿ.ರಾಜರತ್ನಂ, ಸಿದ್ದವನಹಳ್ಳಿ ಕೃಷ್ಣಶರ್ಮ, ಎಂ.ಪಿ.ಎಲ್. ಶಾಸ್ತ್ರಿ ಹಾಗೂ ಹಲವಾರು ಸಾಹಿತಿಗಳ ಜೊತೆ ಸಾಹಿತ್ಯ ಸಂಸ್ಕೃತಿ ಬಗ್ಗೆ ವಿಚಾರ ವಿಮರ್ಶೆ ಮಾಡುತ್ತಿದ್ದರು. ಒಮ್ಮೆ ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರನ್ನು ಭೇಟಿ ಮಾಡಿ, ನಮ್ಮ ಕನ್ನಡದ ಪರಿಸ್ಥಿತಿಯ ಬಗ್ಗೆ ಅವಲೋಕಿಸಿದರು. ಆಲೂರರ ಆಶೀರ್ವಾದದಿಂದ, ಕನ್ನಡ ಚಳುವಳಿಯಲ್ಲಿ ಭಾಗವಹಿಸಲಾರಂಭಿಸಿದರು. ಕನ್ನಡ ಚಳುವಳಿಗೆ ಮೀಸಲಾಗಿ, ಆಲೂರರ ಸಲಹೆಯಂತೆ 'ಕನ್ನಡ ಸಾಹಿತ್ಯ ಕುಟೀರ' ಎಂಬ ಸಂಸ್ಥೆಯನ್ನು ಸುಬ್ಬರಾಯರು ಪ್ರಾರಂಭಿಸಿದರು. 10.9.1961 ರಂದು, ಅ.ನ.ಕೃ. ಅವರ ಅಧ್ಯಕ್ಷತೆಯಲ್ಲಿ, ಕೆಂಗಲ್ ಹನುಮಂತಯ್ಯನವರಿಂದ ಸಂಸ್ಕೃತ ಕಾಲೇಜಿನಲ್ಲಿ ಉದ್ಘಾಟಿಸಿದರು. ಈ ಸಂಸ್ಥೆಯ ಮೂಲಕ ಹಲವಾರು ಗಣ್ಯರನ್ನು ಕೂಡಿ ಸುಮಾರು 40 ವರ್ಷಗಳ ಕಾರ್ಯನಿರ್ವಹಣೆ ನಡೆಯಿತು. ಪೂಜ್ಯ ಶ್ರೀ ಡಿ.ವಿ. ಗುಂಡಪ್ಪನವರು, ಬಿ.ಡಿ. ಜತ್ತಿ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೆ. ಸೋಗಿ, ಕೆ. ಹನುಮಂತಯ್ಯ, ಅ.ನ.ಕೃ, ವೀರಕೇಸರಿ ಸೀತಾರಾಂಶಾಸ್ತ್ರಿ, ನಿಟ್ಟೂರು ಶ್ರೀನಿವಾಸರಾವ್, ತಿ.ತಾ. ಶರ್ಮ, ತ.ರಾ.ಸು, ಬಿ. ಶಿವಮೂರ್ತಿ ಶಾಸ್ತ್ರಿ, ನ್ಯಾಯಮೂರ್ತಿ ಹೆಚ್. ಹೊಂಬೇಗೌಡ, ನ್ಯಾಯಮೂರ್ತಿ ಸೋಮನಾಥ ಐಯ್ಯರ್ ಹಾಗೂ ಹಲವಾರು ಸಾಹಿತಿಗಳೂ, ರಾಜಕಾರಿಣಿಗಳಿಂದ ಈ ಸಂಸ್ಥೆಗೆ ನೆರವು ಪಡೆದರು. ಕನ್ನಡ ಸಾಹಿತ್ಯ ಕುಟೀರದ ಆಶ್ರಯದಲ್ಲಿ, ನೂರಾರು ಕಾರ್ಯಕ್ರಮಗಳು, ಪ್ರಶಸ್ತಿ ಸಮಾರಂಭಗಳು, ಸ್ಮರಣ ಸಂಚಿಕೆಗಳು, ಅಭಿನಂದನಾ ಗ್ರಂಥಗಳು ಸಾಕಾರಗೊಂಡವು. ದಿನಾಂಕ 16.12.61ರಲ್ಲಿ ಕೇಂದ್ರ ಸಂಸ್ಥೆಯಾಗಿ, ಕನ್ನಡ ಜನತೆಯನ್ನು ಜಾಗೃತ ಮಾಡಲು, **ಕರ್ನಾಟಕ ಸಂಯುಕ್ತ ರಂಗ** ಎಂಬ ಸಂಸ್ಥೆಯನ್ನು, ಸ್ಥಾಪಿಸಿ ಅದರ ಕಾರ್ಯದರ್ಶಿಗಳಾದರು. ಅಧ್ಯಕ್ಷರು ಅ.ನ.ಕೃ., ಸುಬ್ಬರಾಯರು ಕಾರ್ಯದರ್ಶಿ ಹಾಗೂ 12 ಪದಾಧಿಕಾರಿಗಳ ಸಮಿತಿಯಿಂದ ಆರಂಭವಾಯಿತು. ನಗರದ ವಿವಿಧ ಬಡಾವಣೆಯಲ್ಲಿ ಬಹಿರಂಗ ಸಭೆಗಳನ್ನು ಏರ್ಪಡಿಸಿ ಭಾಷಣಕಾರರಾಗಿ, ವೀರಕೇಸರಿ, ತಿ.ತಾ. ಶರ್ಮ, ನಾಡಿಗೇರ ಕೃಷ್ಣರಾಯರು, ಬೀಚಿ, ಅಭಿನೇತ್ರಿ ಎಂ.ವಿ. ರಾಜಮ್ಮ, ನಾ.ಕೃ. ಸತ್ಯನಾರಾಯಣ ಮುಂತಾದವರು, ಹೀಗಾಗಿ ಕನ್ನಡಿಗರಲ್ಲಿ ಆತ್ಮಗೌರವದ ಪ್ರಜ್ಞೆ ಜಾಗೃತವಾಗಿ, ಕನ್ನಡ ವೃತ್ತಪತ್ರಿಕೆಗಳ ಹಂಚಿಕೆ, ಕನ್ನಡ ಪುಸ್ತಕಗಳ ಓದುಗರ ಸಂಖ್ಯೆ, ಚಲನಚಿತ್ರಗಳ ನಿರ್ಮಾಣ, ಇತ್ಯಾದಿ., ಹೆಚ್ಚಾಯಿತು.



ಬಹಳ ಹಿಂದಿನಿಂದಲೂ ಬೆಂಗಳೂರಿನಲ್ಲಿ ರಾಮೋತ್ಸವದ ಕಾರ್ಯಕ್ರಮಗಳು ನಡೆಯುತ್ತಿತ್ತು. ಆದರೆ, ಕನ್ನಡಿಗ ಸಂಗೀತಗಾರರನ್ನು ಕೇಳುವವರೇ ಇರಲಿಲ್ಲ. ಆಗ ಏಪ್ರಿಲ್ 1962ರಂದು, ಎಂ.ಎಸ್. ಸುಬ್ಬಲಕ್ಷ್ಮೀರವರ ಕಾರ್ಯಕ್ರಮ ನಡೆಯುತ್ತಿದ್ದಾಗ, ಚಿಕ್ಕ ಲಾಲ್‌ಬಾಗ್‌ನಿಂದ ಚಾಮರಾಜಪೇಟೆವರೆಗೆ, ಅ.ನ.ಕೃ. ಅವರ ನೇತೃತ್ವದಲ್ಲಿ, ಕಪ್ಪು ಬಾವುಟ ಪ್ರದರ್ಶನ ನಡೆಸಿ, ಸುಬ್ಬರಾಯರು ಸಕ್ರಿಯವಾಗಿ ಭಾಗವಹಿಸಿದರು. ಇದರಿಂದ ಟಿ. ಚೌಡಯ್ಯ, ಎ. ಸುಬ್ಬರಾವ್ ಸೇರಿ, ಬಹಳಷ್ಟು ಕನ್ನಡ ಸಂಗೀತಗಾರರಿಗೆ ಸ್ಥಾನಮಾನಗಳು ದೊರಕಿದವು. 01 ನವೆಂಬರ್ 1962ರಂದು, ಕರ್ನಾಟಕ ಸಂಯುಕ್ತ ರಂಗದ ಆಶ್ರಯದಲ್ಲಿ, ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ, ಮೊದಲ ಕನ್ನಡ ರಾಜ್ಯೋತ್ಸವ, 3 ದಿನಗಳ ಕಾಲ, ವೈಭವಪೂರ್ಣವಾಗಿ, ಅರ್ಥಗರ್ಭಿತವಾಗಿ ಆಚರಿಸಿದರು. ಅದಕ್ಕೆ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಉಪಸ್ಥಿತಿಯಲ್ಲಿ, ಸುಬ್ಬರಾಯರ ನೇತೃತ್ವದಲ್ಲಿ ನಡೆಯಿತು. ಇದುವರೆಗೂ ಬೂದಿಯಲ್ಲಿ ಮುಚ್ಚಿದ್ದ ಕನ್ನಡ ಚಳುವಳಿ ಕೆಂಡವು ಜಾಗೃತಿಗೊಂಡಿತು.

ಸುಬ್ಬರಾಯರು, ತಮ್ಮ ನಿರಂತರ ಕನ್ನಡಕ್ಕಾಗಿ ಸೇವೆ, ಛಲ, ಆಸಕ್ತಿ, ಕನ್ನಡ ಭಾಷೆಯ ಮೇಲಿದ್ದ ಅಪಾರ ಪ್ರೇಮದಿಂದ, ಕನ್ನಡಕ್ಕೆ

ಸ್ಥಾನಮಾನಗಳನ್ನು ದೊರಕಿಸಿದ್ದಾದರೂ, ತಮ್ಮ ಸ್ವಂತ ಅಗತ್ಯಗಳನ್ನು ಲೆಕ್ಕಿಸದೆ, ಗೌರವಾಭಿಮಾನಗಳನ್ನು ಅಪೇಕ್ಷೆ ಪಡದೆ, ನಿಸ್ವಾರ್ಥವಾಗಿ ಕನ್ನಡ ತಾಯಿಯ ಸೇವೆ ಸಲ್ಲಿಸಿದರು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಕೆ. ಚಂಗಲ ರಾಯರೆಡ್ಡಿಯವರಿಂದ ಆರ್. ಗುಂಡೂರಾವ್‌ರವರೆಗೆ ಎಲ್ಲಾ ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕವಿದ್ದರೂ ತಮಗಾಗಿ ಏನೂ ಬಯಸಿದವರಲ್ಲ. ದಿಗ್ಗಜ ಸಾಹಿತಿಗಳೂ, ರಾಜಕಾರಣಿಗಳನ್ನು ಜೊತೆ ಸೇರಿಸಿ ಮುಂದುವರಿಯುವುದು ಸಾಮಾನ್ಯ ವಿಷಯವಲ್ಲ. ಸುಬ್ಬರಾವ್‌ರವರದು ಆಕರ್ಷಕ ವ್ಯಕ್ತಿತ್ವ. ಅವರ ಕನ್ನಡ ಚಳುವಳಿಯನ್ನು ಒಪ್ಪಿಕೊಂಡು, ದಿಂಡು ದಿಂಡಾಗಿ ಅವರ ಮನೆಗೆ ಜನ ಬರುತ್ತಿದ್ದರು. ಅದರಲ್ಲಿ, ಡಾ. ರಾಜಕುಮಾರ್, ನರಸಿಂಹ ರಾಜು, ಉದಯಕುಮಾರ್, ಶ್ರೀಮತಿ ಚಿಂದೋಡಿ ಲೀಲಾ, ಸನ್ಮಾನ್ಯ ಕೆಂಗಲ್ ಹನುಮಂತಯ್ಯ ಹೆಸರಾಂತ ಸಾಹಿತಿಗಳಾದ ಸನ್ಮಾನ್ಯ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು, ಅ.ನ.ಕೃಷ್ಣರಾಯರು, ಬೀಚಿ, ನಾಡಿಗೇರ ಕೃಷ್ಣರಾಯರು, ರಾಮಮೂರ್ತಿ ಮತ್ತೂ ಹಲವಾರು ಗಣ್ಯರು ಉಂಟು. ಹಲವಾರು ಬಾರಿ ಅವರ ಮನೆಯಲ್ಲೇ ಊಟ, ಉಪಚಾರಗಳು ನಡೆಯುತ್ತಿದ್ದವು. ಶ್ರೀ ಸುಬ್ಬರಾಯರು ಹೊರತಂದ ಸ್ಮರಣ ಸಂಚಿಕೆಗಳು 19. ಅಭಿನಂದನ ಗ್ರಂಥಗಳು 4, ಸನ್ಮಾನ ಸಮಾರಂಭಗಳು ಲೆಕ್ಕವಿಲ್ಲದಷ್ಟು.

ಸುಬ್ಬರಾಯರ ವಾಹನ ಅವರ ಪ್ರಿಯವಾದ ಸೈಕಲ್. ಸುಬ್ಬರಾಯರು ಮನೆಯಲ್ಲೇ ದೊಡ್ಡ ಪುಸ್ತಕ ಗ್ರಂಥಗಳನ್ನು ಸಂಗ್ರಹಿಸಿಟ್ಟಿದ್ದರು. ಬಹಳಷ್ಟು ಪುಸ್ತಕಗಳು ಧಾರವಾಡ ಕನ್ನಡ ವಿಶ್ವವಿದ್ಯಾಲಯಕ್ಕೂ ಕೊಟ್ಟಿದ್ದಾರೆ. ಅಲ್ಲಿ, ಪಿಹೆಚ್.ಡಿ. ಸಂಶೋಧನೆಗೆ ಇವರು ಸಂಗ್ರಹಿರುವ ಪುಸ್ತಕಗಳನ್ನು ಉಪಯೋಗಿಸುತ್ತಿದ್ದಾರೆ. ಸುಬ್ಬರಾಯರು, 1976ರಲ್ಲಿ ನಾಡಿನ ಗಣ್ಯ ವಿದ್ವಾಂಸರು ಲೇಖನ ಬರೆದಿರುವ 'ಮುದ್ದಣ್ಣ ಪ್ರಶಸ್ತಿ ಗ್ರಂಥ'ವನ್ನು ಹೊರತಂದರು.

ಕನ್ನಡ ಸೇವೆಯಲ್ಲಿ ತಮ್ಮ ಕುಟುಂಬದ ಕೈಂಕರ್ಯವನ್ನೂ ಬದಿಗಿರಿಸಿ, ಇದ್ದ ತಮ್ಮ ಅಲ್ಪ ಉತ್ಪತ್ತಿಯಲ್ಲಿಯೇ 'ಸಾಹಿತ್ಯ ಕುಟೀರ'ವೆಂಬ ಸಂಸ್ಥೆಯನ್ನು ಕಟ್ಟಿ, ಬೆಳಸಿ, ಎಲೆ ಮರೆಯ ಕಾಯಿಯಂತೆ ಬದುಕಿ, ಯಾವೊಂದು ಪ್ರತಿಫಲವನ್ನೂ ಬಯಸದೆ, ನಿಷ್ಕಾಮ ಕರ್ಮವನ್ನು ಮಾಡಿದ್ದಾರೆ. ಇಂದಿನ ವರಂತೆ, ಬಯಸಿದ್ದರೆ, ಬೇಡಿದ್ದರೆ, ಅವರಿಗೆ ಅದೆಷ್ಟು ಪ್ರಶಸ್ತಿ, ಪುರಸ್ಕಾರಗಳು, ದೊರೆಯುತ್ತಿದ್ದವೋ ಏನೋ? ಬೇಡವೆಂದರೂ ಕೆಲವು ಸಂಘ ಸಂಸ್ಥೆಗಳು ಸನ್ಮಾನ ಮಾಡಿದ್ದುಂಟು. ಕನ್ನಡ ಪ್ರಮುಖ ನಟ ಉದಯಕುಮಾರ್ ಅವರು ಸುಬ್ಬರಾಯರಿಗೆ, 'ಸಾಹಿತ್ಯ ಜಂಗಮ' ಎಂದು ಎಂದು ಹೆಸರಿಟ್ಟರು. ಶ್ರೀ ಸುಬ್ಬರಾಯರು, ಕನ್ನಡದ ಹೋರಾಟವನ್ನು, ಪೂರ್ಣ ದಿನಚರಿಯನ್ನಾಗಿ ಮಾಡಲು, ಅವರ ಕುಟುಂಬ ಶ್ರೀಮತಿ ಗಮಕಿ ಜಯಲಕ್ಷ್ಮಿ ಮತ್ತು ಅವರ ಮಕ್ಕಳ ಪಾತ್ರ ಬಹಳಷ್ಟು ಇವೆ.

ಸುಬ್ಬರಾಯರಿಗೆ, ಕನ್ನಡ ಸಂಸ್ಕೃತಿ ಬೆಂಗಳೂರಿನಲ್ಲಿ ಇರುವಂತೆ, ಮೊದಲಿಂದಲೂ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ದಕ್ಷಿಣ ಕನ್ನಡ ವಿಭಾಗದಲ್ಲಿ ಇತ್ತೆಂದು ಗಾಢ ವಿಶ್ವಾಸ. ಕರ್ನಾಟಕ ಏಕೀಕರಣಕ್ಕೆ ಇದು ನಾಂದಿ ಆಗಿ, ಜ್ಞಾನಪೀಠ ವಿಜೇತ ಕವಿ ವಿ.ಕೆ. ಗೋಕಾಕ್‌ರವರ ಚಳುವಳಿಗೆ ಧುಮುಕಿದರು. ಶ್ರೀ ಎಸ್. ನಿಜಲಿಂಗಪ್ಪನವರ ಕೋರಿಕೆಯ ಮೇರೆ ನ್ಯಾಯಾಮೂರ್ತಿ ಮಹಾಜನ್ ಕಮಿಟಿ ಶಿಫಾರಸ್ಸನ್ನು ಸಭೆಯ ಮನ್ನಣೆ ಮಾಡಲು ನೆರವಾದರು. ಕನ್ನಡದ 'ಕುಮಾರವ್ಯಾಸ ಭಾರತವನ್ನು ಎಲ್ಲಾ ಕನ್ನಡಿಗರಿಗೆ ತಲುಪಬೇಕೆಂದು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರಿಂದ ಪ್ರತಿ ಪುಸ್ತಕ 2 ರೂಪಾಯಿ ಮೌಲ್ಯಕ್ಕೆ ವಿತರಣೆ ಮಾಡಿಸಿದ ಕನ್ನಡ ಪ್ರೇಮಿ ಸುಬ್ಬರಾಯರು.

ಶ್ರೀ ಸುಬ್ಬರಾಯರ ಅಭಿನಂದನೆಗಾಗಿ, 24.11.2004ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ಮಾಸ್ತರ್ ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಹಲವಾರು ಸಾಹಿತಿಗಳು ಸೇರಿ, ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಿದ್ದರು. ಅವರ ಗೌರವಾರ್ಥಕ್ಕಾಗಿ ಸಂಚಿಕೆಯನ್ನು 'ಸುಕೃತ' ಎಂಬ ಸಂಚಿಕೆಯನ್ನು ಪ್ರಕಟಿಸಿ ಸನ್ಮಾನ ಮಾಡಿದರು. ಸುಬ್ಬರಾಯರು 02.9.2008ರಂದು ಸ್ವರ್ಗಸ್ಥರಾದರು. ಆದರೆ, ಅವರು ಮಾಡಿದ ನಿಸ್ವಾರ್ಥ, ನಿರಂತರ ಕನ್ನಡಸೇವೆ, ಕನ್ನಡ ಹೋರಾಟ, ಕನ್ನಡಪರ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ.

ಶ್ರೀ ಸುಬ್ಬರಾಯರು ಕನ್ನಡದ ಸೈಕಲ್ ಸರದಾರ ಎಂದರೂ ತಪ್ಪಾಗಲಾರದು. ಅದಕ್ಕೇ ಅವರಿಗೆ ಸೈಕಲ್ ಸುಬ್ಬರಾವ್ ಎಂದು ಜನ ಗುರುತಿಸುತ್ತಿದ್ದರು. ಶ್ರೀ ಸುಬ್ಬರಾಯರು, ನನ್ನ ಭಾವನವರು ಎಂದು ಹೆಮ್ಮೆ, ನನ್ನ ಚಿಕ್ಕ ವಯಸ್ಸಿನಿಂದಲೇ ಅವರೊಂದಿಗೆ ಒಡನಾಟವಿದ್ದುದು ನನ್ನ ಪುಣ್ಯ.



✍ **ಅಟ್ಟೂರು ರಾಮಕೃಷ್ಣ ಶರ್ಮಾ**

---

**ಪುಟ 7ರಿಂದ ಮುಂದುವರೆದಿದೆ.... (ಬಿ.ಎಸ್.ಪಿ.)**

ಹಾಗೆ ಬಾಯಲ್ಲಿ ಹೇಳಿ ಬೋರ್ಡ್ ಮೇಲೆ ಸಾಲ್ವ್ ಮಾಡುತ್ತಿದ್ದ ರೀತಿ ನನಗಂತೂ ತುಂಬಾ ಇಷ್ಟವಾಗುತ್ತಿತ್ತು. ಪರೀಕ್ಷೆಯ ದಿನಗಳ ಮುಂಚೆ ತರಗತಿಗಳಲ್ಲಿ ಪಾಠ ಅರ್ಥ ಮಾಡಿಸಿ ಹೇಳುತ್ತಿದ್ದರಲ್ಲದೆ ಪರೀಕ್ಷೆಗೆ ಹೇಗೆ ತಯಾರಿ ಮಾಡಿಕೊಳ್ಳಬೇಕು, ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಪತ್ರಿಕೆ ಕೈಗೆ ಬಂದೊಡನೆ ಯಾವ ರೀತಿ ಉತ್ತರಿಸಬೇಕು, ಅಂಕಗಳನ್ನು ಸುಲಭವಾಗಿ ಹೇಗೆ ಪಡೆಯಬೇಕು ಎಂಬುದನ್ನೆಲ್ಲಾ ಹೇಳಿಕೊಡುತ್ತಿದ್ದರು. ನಾವೆಲ್ಲಾ ಪರೀಕ್ಷೆಗಳನ್ನು ಹೆದರದೆ ಧೈರ್ಯದಿಂದ ಬರೆಯುವಂತೆ ಮಾಡುತ್ತಿದ್ದರು. ವಿದ್ಯಾರ್ಥಿಗಳು ಯಾವೊಂದು ತರಗತಿಗೆ ಗೈರಾಗದಂತೆ ಪ್ರತೀ ತರಗತಿಗೂ ಸ್ವಇಚ್ಛೆಯಿಂದ ಹಾಜರಾಗಿ, ವಿಷಯಗಳಲ್ಲಿ ಆಸಕ್ತಿ ಬರುವಂತೆ ಮಾಡುತ್ತಿದ್ದರು. ನಾನೂ ಅವರ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಅವರ ಬೋಧನಾ ಶೈಲಿ, ವೈಖರಿ ಎಲ್ಲರನ್ನೂ ಚಕಿತಗೊಳಿಸುತ್ತಿತ್ತು. ಪಾಠ ಮಾಡುವಾಗಲೂ ಪ್ರತಿಯೊಂದನ್ನೂ ಕನ್ನಡದಲ್ಲೊಮ್ಮೆ, ಇಂಗ್ಲಿಷ್‌ನಲ್ಲೊಮ್ಮೆ ವಿವರಿಸಿ ಹೇಳಿ ಅರ್ಥಮಾಡಿಸಿ ಮನದಟ್ಟು ಮಾಡಿಸುತ್ತಿದ್ದುದು ಮರೆಯುವಂತಿಲ್ಲ. ನಮ್ಮ ಸಮುದಾಯದಲ್ಲಿ ವಾಣಿಜ್ಯ ವಿಭಾಗ ವಿಷಯಗಳೆಂದರೆ ಬಿ.ಎಸ್.ಪಿ.ಯವರು ನೆನಪಿಗೆ ಬರುತ್ತಾರೆ.

ನಮ್ಮ ಬೃಹಚ್ಚರಣ ಸಂಘದ ಹಿಂದಿನನ ಪದಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿರುವ ಶ್ರೀಯುತರು ಸಮುದಾಯದ ಇಂಜಿನೀಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯವನ್ನು ಮಾಡುವ ಉದ್ದೇಶವನ್ನು ಹೊಂದಿದ್ದಾರೆ. ಈಗಿನ ಸಂಘದ ಕಾರ್ಯಕಾರಿ ಸಮಿತಿಯನ್ನು, **ಬೃಹಚ್ಚರಣ** ಪತ್ರಿಕೆಯನ್ನು ಶ್ಲಾಘಿಸುತ್ತಾರೆ. ಸಮುದಾಯದ ಯುವ ಪೀಳಿಗೆಯು ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಶ್ರೀಮದ್ ಭಗವದ್ಗೀತೆಯಲ್ಲಿ ಭಗವಂತನು 'ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ' ಎಂದು ನುಡಿದಿರುವಂತೆ ನಮ್ಮ ಬೃಹಚ್ಚರಣ ಸಮುದಾಯದಲ್ಲಿ ಒಂದು ಶಕ್ತಿಯಲ್ಲಿ ಸತತ ಅಭ್ಯಾಸದಿಂದ ವೈರಾಗ್ಯವು ಹಿಡಿತಕ್ಕೆ ಸಿಗುತ್ತದೆ ಎಂಬುದು ಇಲ್ಲಿ ಕಾಣಬಹುದು. ಇದು ಬಿ.ಎಸ್.ಪಿ.ಯವರಿಗೆ ಸಂಪೂರ್ಣವಾಗಿ ಹೊಂದುತ್ತದೆ.

ಶ್ರೀ ಬಿ.ಎಸ್.ಪಿ. ಎಂದೊಡನೆ ಸರಳ ವ್ಯಕ್ತಿತ್ವ, ಶ್ರಮಜೀವನ, ಜೀವನೋತ್ಸಾಹ ಎಲ್ಲರಿಗೂ ಮಾರ್ಗದರ್ಶನ ಆಗಿದೆ. ಸ್ನೇಹಜೀವಿ ಇದೇ ವರ್ಷ ಒಂಬತ್ತು ದಶಕಗಳನ್ನು ಪೂರೈಸಿರುವ ನಮ್ಮ ಬಿ.ಎಸ್.ಪಿ. 'ಸರ್' ಅನ್ನು ಈ ಸಂಚಿಕೆಯಲ್ಲಿ ನನ್ನ ತಿಳುವಳಿಕೆಗೆ ತಕ್ಕಂತೆ ಒಂದು ಚಿಕ್ಕ ಪರಿಚಯ ಮಾಡಿಸುವ ಸೌಭಾಗ್ಯ ನನ್ನದಾಗಿದೆ. ಇಂತಹ ಅತ್ಯುತ್ತಮ ಶಿಕ್ಷಕರು ನಮ್ಮವರಾಗಿ ನಮ್ಮೊಡನಿರುವುದು ನಮ್ಮ ಸುಯೋಗ.



✍ **ಲಲಿತಾ ರಮೇಶ್**
**9945199637**

# ಯುಗಾದಿ ಹಬ್ಬ 29.3.2017 ಮತ್ತು ಶ್ರೀರಾಮನವಮಿ 5.4.2017

ಹಿಂದೂ ಧರ್ಮವನ್ನು ಆಚರಿಸುವವರು ಭಗವಂತನನ್ನು ತೃಪ್ತಿಪಡಿಸಲು ನಾನಾ ಹಬ್ಬಗಳನ್ನು ಆಚರಿಸುವುದು ವಾಡಿಕೆಯಾಗಿದೆ. 'ಉಗಾದಿ' ಅಥವಾ 'ಯುಗಾದಿ' ಚಂದ್ರನ ಚಲನೆಯನ್ನು ಆಧರಿಸಿಕೊಂಡು, ಅಂದರೆ ಚಾಂದ್ರಮಾನ ಪದ್ಧತಿಯನ್ನು ಅನುಸರಿಸಿ, ಜನರು ಮಾಡುವ ಚೈತ್ರ, ಶುಕ್ಲ ಪಕ್ಷದ ಮೊದಲನೆಯ ಹಬ್ಬ. ಚಂದ್ರನ ಚಲನೆಯನ್ನು ಆಧರಿಸಿ ದಿನಗಣನೆ ಮಾಡುವುದನ್ನು ಚಾಂದ್ರಮಾನ ಪದ್ಧತಿ ಎಂತಲೂ, ಸೂರ್ಯನು ಸ್ಥಿರ ಗ್ರಹವಾದರೂ, ಅಶ್ವಿನಿ ನಕ್ಷತ್ರದ ಹತ್ತಿರ ರವಿಯು ಬಂದಾಗ ಸೌರಮಾನ ಯುಗಾದಿಯಂತಲೂ ಪರಿಗಣಿಸುತ್ತಾರೆ.

ಚಾಂದ್ರಮಾನ ಸಂವತ್ಸರವನ್ನು ಪರಿಶೀಲಿಸಿದರೆ ಚಂದ್ರನು ಒಂದೊಂದು ತಿಂಗಳೂ ಹೆಚ್ಚಿ, ಇಳಿದು, ಹುಣ್ಣಿಮೆ/ಅಮಾವಾಸ್ಯೆಯಾಗಿ ಪರಿಗಣಿಸುವುದು. ಇದೇ ರೀತಿ 12 ತಿಂಗಳು ಮುಗಿದ ಮೇಲೆ ಹೊಸ ಚಾಂದ್ರಮಾನ ಯುಗಾದಿ ಬರುವುದು. ಪಂಚಾಂಗ ಕರ್ತರು ಇಂಗ್ಲಿಷ್ ಕ್ಯಾಲೆಂಡರನ್ನು ಅನುಸರಿಸಲು ಮೂರು ವರ್ಷ ಆದ ಮೇಲೆ, ಒಂದು 'ಅಧಿಕ ಮಾಸ'ವೆಂದು 'ಅಶ್ವಿನಿ' ನಕ್ಷತ್ರವನ್ನು ಅವಲಂಬಿಸಿ ಸಿದ್ಧಾಂತಿಸಿದ್ದಾರೆ. ಆಶ್ಚರ್ಯವೇನೆಂದರೆ, ಚಂದ್ರಗ್ರಹ ಭೂಮಿಯನ್ನು ಸುತ್ತುವಾಗ, ಒಂದು ಭಾಗ ಮಾತ್ರ ಕಾಣುತ್ತದೆ. ಅದರ ಹಿಂದೆ ಕಾಣುವುದಿಲ್ಲ.

ಚಾಂದ್ರಮಾನ ಯುಗಾದಿಯನ್ನು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕೆಲವು ಮಹಾರಾಷ್ಟ್ರ ಭಾಗಗಳಲ್ಲಿ ಆಚರಿಸುತ್ತಾರೆ. ಪ್ರಪಂಚದ ಇತರ ಭಾಗಗಳಲ್ಲಿ ನೆಲಸಿರುವ ಹಿಂದೂಗಳೂ ಯುಗಾದಿ ಹಬ್ಬವನ್ನು ಆಚರಿಸುವುದು, ಅವರ ದೇಶ ಪ್ರೇಮ ಮತ್ತು ಆಚಾರ ವಿಚಾರ ಸೂಚಿಸುತ್ತದೆ. ಆ ದಿನ, ಕುಟುಂಬದವರೆಲ್ಲಾ ಸೇರಿ ಸೂರ್ಯನಿಗೆ ನಮಸ್ಕರಿಸಿ, ಹೊಸ ಪಂಚಾಂಗವನ್ನು ದೇವರ ಹತ್ತಿರ ಇಟ್ಟು, ಪೂಜಿಸಿ 'ಪಂಚಾಂಗ ಶ್ರವಣ' ಮಾಡುವ ಪದ್ಧತಿ. ಸಾಮಾನ್ಯವಾಗಿ ಹಿಂದೂ ಮತವನ್ನು ಅನುಸರಿಸುವ ಎಲ್ಲರೂ, ತಮ್ಮ ತಮ್ಮ ಮನೆಗಳನ್ನು ಸ್ವಚ್ಛ ಮಾಡಿ, ಮಾವಿನ ಎಲೆಗಳಿಂದ ಅಲಂಕರಿಸಿ, ಹೊಸ ಬಟ್ಟೆಗಳನ್ನು ಎಲ್ಲರಿಗೂ ತಂದು, ಸಂತೋಷದಲ್ಲಿ ಭಾಗಿಯಾಗುತ್ತಾರೆ. ಇನ್ನೊಂದು ಈ ಹಬ್ಬದ ವಿಶೇಷವೆಂದರೆ, ಬೇವು ಮತ್ತು ಬೆಲ್ಲವನ್ನು ಎಲ್ಲರಿಗೂ ಹಂಚುವುದು. ಇದರ ಅರ್ಥ; ಮನುಷ್ಯನು ಜನ್ಮ ಎತ್ತಿದ ಮೇಲೆ ಕಷ್ಟ-ಸುಖಗಳೆರಡನ್ನೂ ಅನುಭವಿಸುವುದು ಸಹಜ. ಬೇವು ಮತ್ತು ಬೆಲ್ಲ. ಕಷ್ಟ ಸುಖಗಳ ಸಂಕೇತ. ಯುಗಾದಿ ಹಬ್ಬದ ದಿನ ಬೇವು ಬೆಲ್ಲ ತಿನ್ನುವಾಗ ಹೇಳಬೇಕಾದ ಶ್ಲೋಕ:

**ಶತಾಯುರ್ವಜ್ರದೇಹಾಯ ಸರ್ವ ಸಂಪತ್ಕರಾಯಚ ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ ॥**

ಆದ್ದರಿಂದ ಯುಗಾದಿ ಬರಲಿರುವ ವರ್ಷವೆಲ್ಲಾ ತನಗೆ ಬಂದ ಕಷ್ಟ-ಸುಖಗಳೆರಡನ್ನೂ ಒಂದೇ ರೀತಿ ಎದುರಿಸಿ, ಶಾಂತಿಯನ್ನು ಪಡೆಯಲು ದೇವರನ್ನು ಪ್ರಾರ್ಥಿಸುವುದು. ಎಲ್ಲರೂ ತಮ್ಮ ತಮ್ಮ ಶಕ್ತಿಯಾನುಸಾರ ತಿಂಡಿ ತಿನಿಸುಗಳನ್ನು ಮಾಡಿ, ಎಲ್ಲಾ ಬಂಧು-ಮಿತ್ರರಿಗೆ ಹಂಚಿ ತಾವೂ ಸಂತೋಷದಿಂದ ತೃಪ್ತಿಯನ್ನು ಪಡೆಯುತ್ತಾರೆ. ಕನ್ನಡದ ಕವಿ ದ.ರಾ.ಬೇಂದ್ರೆಯವರು ರಚಿಸಿರುವ 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎಂಬ ಹಾಡು ನಮ್ಮಗೆಲ್ಲರ ನೆನಪುಗಳನ್ನು ಮರುಕಲಿಸುತ್ತಿರುತ್ತದೆ.

**"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ ।**
**ಹೊಂಗೆ ಹೂವ ತೊಂಗಲಲ್ಲಿ ಬೃಂಗದ ಸಂಗೀತ ಕೇಳಿ ಮತ್ತೆ ಕೇಳಿ ಬರುತಿದೆ**
**ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವಕಳೆಯ ತರುತಿದೆ ।**

ಹೋಳಿಗೆ ಮತ್ತು ಪಾಯಸ ಮುಖ್ಯವಾದ ಆ ದಿನದ ಸಿಹಿ ಪದಾರ್ಥ ಮತ್ತು ಎಲ್ಲರ ಅಭಿರುಚಿಯಾದ ತಿನಿಸು. ಯುಗಾದಿ ಹಬ್ಬ ಆದ ಮೇಲೆ ಮರುದಿನ ಕೂಡ ಖಾರವಾದ ರುಚಿಕರ ತಿಂಡಿಗಳನ್ನು ಮಾಡಿ ಜನರು ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳುವುದು ಕೆಲ ಜನರಲ್ಲಿ ರೂಢಿಯಲ್ಲಿದೆ.

**ಶ್ರೀರಾಮನವಮಿ**



ಶ್ರೀರಾಮನವಮಿ ಯುಗಾದಿ ಆದ ಮೇಲೆ ಬರುವ ಇನ್ನೊಂದು ಮುಖ್ಯವಾದ ಹಿಂದೂ ಹಬ್ಬ. ಇದನ್ನು ಇಂಡಿಯಾದ ಎಲ್ಲಾ ಭಾಗಗಳಲ್ಲೂ ಆಚರಿಸುತ್ತಾರೆ. ಶ್ರೀರಾಮದೇವರು ವಿಷ್ಣುವಿನ ಏಳನೆಯ ಅವತಾರವೆಂದೂ ಮತ್ತು ವಾಲ್ಮೀಕಿ ರಚಿತ ರಾಮಾಯಣದಲ್ಲಿ ಶ್ರೀರಾಮರ ಬಾಲ್ಯ, ಸೀತಾ ಕಲ್ಯಾಣ ಮತ್ತು ಲಂಕೆಯ ರಾವಣನನ್ನು ಸೋಲಿಸಿ ಶತೃಗಳನ್ನು ನಿಗ್ರಹಿಸಿ, ಶಾಂತಿಯನ್ನು ಸ್ಥಾಪಿಸಿ ಅಯೋಧ್ಯೆಯಲ್ಲಿ ಭರತ ಮುನಿ ದೇಶವನ್ನು ಆಳಿ ಸುಖ, ಶಾಂತಿಯನ್ನು ಸ್ಥಾಪಿಸಿದರೆಂದೂ ವಿವರಿಸಲಾಗಿದೆ. ಚೈತ್ರ ಮೊದಲನೆಯ ದಿನದಿಂದ ನವಮಿವರೆಗೆ ಒಂಬತ್ತು ದಿನಗಳು 'ವಸಂತ ನವರಾತ್ರಿ' ಎಂದು ಭಜನೆ. ಕೀರ್ತನೆಗಳು ಮತ್ತು ಸಂಗೀತ ಸಮಾರಂಭಗಳನ್ನು ಎಲ್ಲಾ ಹಿಂದೂಗಳೂ ಆಚರಿಸುತ್ತಾರೆ. ಭಕ್ತರು ರಾಮನವಮಿ ಒಂಬತ್ತು ದಿನಗಳೂ ಪೂಜೆ ಮಾಡಿ ಪಾನಕ, ಮಜ್ಜಿಗೆ, ಕೋಸಂಬರಿ ಮತ್ತು ಪ್ರಸಾದವನ್ನು ಎಲ್ಲರಿಗೂ ಹಂಚಿ, ದೇವರ ಅನುಗ್ರಹಕ್ಕೆ ಪಾತ್ರ ರಾಗುತ್ತಾರೆ. ಈ ವರ್ಷ ಚಾಂದ್ರಮಾನ ಯುಗಾದಿಯು, ಶ್ರೀ ಹೇವಿಳಂಬಿ ಸಂವತ್ಸರ ಚೈತ್ರ ಶುಕ್ಲಪಕ್ಷ ಪಾಡ್ಯ ಉಪರಿ ಬಿದಿಗೆ ಮಾರ್ಚಿ 29ನೇ ತಾರೀಖು ಬುಧವಾರ ಆಚರಿಸಲ್ಪಡುತ್ತದೆ. ಇದಾದ ಮೇಲೆ, ಸೌರಮಾನ ಯುಗಾದಿಯನ್ನು ಏಪ್ರಿಲ್ ತಿಂಗಳು 14ನ್ನು ತಾರೀಖು ಶುಕ್ರವಾರ ಕರ್ನಾಟಕದ ಕೆಲವು ಭಾಗಗಳು ಮೇಲೆ, ಸೌರಮಾನ ಯುಗಾದಿಯನ್ನು ಏಪ್ರಿಲ್ ತಿಂಗಳು 14ನೇ ತಾರೀಖು ಶುಕ್ರವಾರ ಕರ್ನಾಟಕದ ಕೆಲವು ಭಾಗಗಳು ಮತ್ತು ಮುಖ್ಯವಾಗಿ ತಮಿಳುನಾಡಿನಲ್ಲಿ ಆಚರಿಸುತ್ತಾರೆ. ಸೌರಮಾನ ಯುಗಾದಿಯು ಏಪ್ರಿಲ್ 5ನೇ ತಾರೀಖು ಬುಧವಾರ ಬಂದಿದೆ.




**ಎಂ.ಪಿ. ರಂಗನಾಥನ್**

## ಮಕರ ಸಂಕ್ರಾಂತಿ – ಸಂದೇಶ

ಮನದಾಳದಿ ನಮ್ಮ ನಾಡುನುಡಿಗಳನ್ನು ಪೂಜಿಸುತ್ತಾ
ಕರುಣಾಮಯಿಯಾದ ದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಾ
ರವಿಯಂತೆ ಪ್ರತಿದಿನವೂ ಪ್ರಜ್ವಲಿಸುತ್ತಾ
ಸಂತೋಷದಿ ಸುಖ-ದು:ಖಗಳಲ್ಲಿ ಮಿಂದೇಳುತ್ತಾ
ಕ್ರಾಂತ ದೃಷ್ಟಿಯಿಂದ ದಿಗಂತವನ್ನು ವೀಕ್ಷಿಸುತ್ತಾ
ತಿಂಗಳ ಬೆಳಕಿನ ಬೆಳದಿಂಗಳಂತೆ ಶೋಭಿಸುತ್ತಾ
ಸಂಸ್ಕಾರ ಸಂಸ್ಕೃತಿಗಳನ್ನು ಪೋಷಿಸಿ ರಕ್ಷಿಸುತ್ತಾ
ದೇಶ ವಿದೇಶದೆಡೆ ಸಂಕ್ರಾಂತಿ ಸಂದೇಶ ಸಾರುತ್ತಾ
ಶತ-ಶತಮಾನಗಳವರೆಗೆ ಸಂಭ್ರಮವು
ಹೀಗೇ ಮುಂದುವರೆಯಲಿ.


**ಆರ್.ಎಸ್.ರಾಜಗೋಪಾಲ್**

# ಹೋಳಿ – ಒಂದು ನೋಟ



**ಈ** ವರ್ಷದ 3ನೇ ತಿಂಗಳಿನಲ್ಲಿ ಚಳಿಗಾಲ ಮುಗಿದು ವಸಂತ ಮಾಸದ ಪ್ರಾರಂಭದಲ್ಲಿ ಬರುವ ಹೋಳಿ ಹಬ್ಬವನ್ನು ನಮ್ಮ ದೇಶ ಮತ್ತು ನೇಪಾಳದಲ್ಲಿ ಹಿಂದೂಗಳು ವಿಜೃಂಭಣೆಯಿಂದ ಆಚರಿಸುತ್ತಾರೆ. ಇದು ಪ್ರೀತಿ ಮತ್ತು ಬಣ್ಣದ ಸಂಕೇತ. ವಿಶೇಷವಾಗಿ ಈ ಹಬ್ಬವು ದುಷ್ಟ ಶಕ್ತಿಯಿಂದ ಮುಕ್ತಿಯನ್ನು ಪಡೆಯುವ ಸಂಕೇತವನ್ನು ಎತ್ತಿ ತೋರುತ್ತದೆ. ಈ ದಿನ ಬಹಳ ಒಳ್ಳೆಯ ದಿನ. ಆದ್ದರಿಂದ ಅಂದು ಬಿಟ್ಟುಹೋಗಿರುವ ಸಂಬಂಧವನ್ನು ಒಗ್ಗೂಡುವ ಮತ್ತು ಹಳೆಯದನ್ನು ಮರೆಯುವ ಸುಗ್ಗಿಯ ದಿನ. ಫಾಲ್ಗುಣ ಮಾಸದ ಕೊನೆಯಲ್ಲಿ ವಿಕ್ರಮ ನಾಮ ಸಂವತ್ಸರದಲ್ಲಿ ಬರುವ ಪೌರ್ಣಮಿಯಂದು ಈ ಹಬ್ಬವನ್ನು ಅಂದು ರಾತ್ರಿ ಮತ್ತು ಮಾರನೆಯ ದಿನ ಆಚರಿಸಲಾಗುತ್ತದೆ. ಮೊದಲನೆಯ ದಿನವನ್ನು ಹೋಳಿ ಕಾ ದಹನ್ ಮತ್ತು ಮಾರನೆಯ ದಿನವನ್ನು ರಂಗ್ವಾಳಿ ಹೋಳಿ ಎಂದು ಕರೆಯಲ್ಪಡುತ್ತದೆ. ಅಂದು ರಾಕ್ಷಸ ಹಿರಣ್ಯಕಶಿಪುವಿನ ತಂಗಿ ಹೋಳಿಕೆಯ ದಹನದ ದಿನ. ಆ ಸಂತೋಷಕ್ಕೆ ಮಾರನೆಯ ದಿನ ಬಣ್ಣದ ಬದುಕಿನಲ್ಲಿ ಜನ ತೇಲಾಡುತ್ತಾರೆ. ಈ ದಿನಗಳಲ್ಲಿ ಹೋಳಿ ಹಬ್ಬವು ಯುರೋಪ್ ಮತ್ತು ಅಮೇರಿಕಾ ದೇಶಕ್ಕೆ ಕೂಡ ಹಬ್ಬಿದೆ. ಈ ಬಣ್ಣದ ಹಬ್ಬವನ್ನು ಹಿಂದುಗಳ ದೇವರಾದ ವಿಷ್ಣು ಮತ್ತು ಪ್ರಹ್ಲಾದರನ್ನು ಗೌರವಿಸುವ ಮತ್ತೊಂದು ಸಾಂಕೇತಿಕ ದಂತ ಕಥೆಗೆ ಹೋಲಿಸುತ್ತಾರೆ. ಭಾಗವಥ ಪುರಾಣದಲ್ಲಿ ಅಸುರರಿಗೆ ರಾಜನಾದ ಹಿರಣ್ಯಕಶಿಪು ಅತ್ಯಂತ ಒಳ್ಳೆಯ ಹೆಸರನ್ನು ಮತ್ತು ದೇವತೆಗಳಿಂದ ವಿಶೇಷತೆಯ ಶಕ್ತಿಯನ್ನು ಪಡೆದವನು. ಮನುಷ್ಯ ಮತ್ತು ಪ್ರಾಣಿಗಳಿಂದ ಗಾಳಿಯಲ್ಲಿ ಮತ್ತು ನೀರಿನಲ್ಲಿ ಸಾವೇ ಬರದ ಹಾಗೆ ವರವನ್ನು ಪಡೆದವನು. ಇದರಿಂದ ಅವನಿಗೆ ಬಹಳ ಅಹಂಕಾರವಿತ್ತು. ಎಲ್ಲರೂ ಅವನನ್ನು ದೇವರೆಂದು ಪೂಜಿಸಬೇಕೆಂದು ಆಜ್ಞೆ ಹೊರಡಿಸಿದ್ದನು. ಅವನ ಮಗನಾದ ಪ್ರಹ್ಲಾದನು ಇದಕ್ಕೆ ಒಪ್ಪಿಗೆ ಕೊಡಾದಿದ್ದಕ್ಕೆ ಅವನಿಗೆ ಬಹಿಷ್ಕಾರ ಹಾಕಿ ಬಹಳ ತೊಂದರೆಯನ್ನು ಕೊಡುತ್ತಿದ್ದನು. ಆದರೆ ಯಾವುದೂ ಅವನಿಗೆ ಕಷ್ಟವಾಗುತ್ತಿರಲಿಲ್ಲ. ಏಕೆಂದರೆ ಪ್ರಹ್ಲಾದ ವಿಷ್ಣುವಿನ ಭಕ್ತ. ಆಗ ಹಿರಣ್ಯಕಶಿಪುವಿನ ತಂಗಿ ಹೋಳಿಕೆ ಪ್ರಹ್ಲಾದನನ್ನು ಬೆಂಕಿಯಲ್ಲಿ ಕೂರಲು ಹೇಳಿದಳು. ಬೆಂಕಿ ಅವನ ಬದಲು ಅವಳನ್ನೇ ಸುಟ್ಟಿತು. ಆಗ ವಿಷ್ಣುವು ನರಸಿಂಹನ ಅವತಾರದಲ್ಲಿ ಬಂದು ಧರ್ಮ ವನ್ನು ಕಾಪಾಡಿ ಕೊನೆಗೆ ರಾಕ್ಷಸನನ್ನು ಸಂಹರಿಸುತ್ತಾನೆ. ಆದ್ದರಿಂದ ಹೋಳಿ ಹಬ್ಬ ಒಂದು ಧರ್ಮದ ಸಂಕೇತ ಮತ್ತು ಹೊಸ ದಿನ ಶುರುವಾಗುವ ಹಬ್ಬದ ಆಚರಣೆ. ಬಣ್ಣದ ರಂಗಿನಲ್ಲಿ ತೇಲಾಡುವ ಹಬ್ಬ.

ಇದಾದ 15 ದಿನದಕ್ಕೆ ಚೈತ್ರ ಮಾಸ ಶುರುವಾಗುವುದು. ನಮ್ಮಗಳ ಹಬ್ಬ ಪ್ರಾರಂಭ. ಹೊಸ ವರ್ಷ ಮತ್ತು ಹೊಸ ಸಂವತ್ಸರ.



ಶ್ರೀನಿವಾಸಮೂರ್ತಿ
9449445311

ಮಹಿಳಾ ದಿನಾಚರಣೆ – ಲೇಖನ

# ಮಾತೃದೇವೋಭವ

ಎಲ್ಲಿ ಮಹಿಳೆಯು ಪೂಜಿಸಿ, ಗೌರವಿಸಲ್ಪಡುವಳೋ ಅಲ್ಲಿ ದೇವತೆಗಳಿರುತ್ತಾರೆಂದು ಮನು ತಿಳಿಸಿರುತ್ತಾನೆ. 'ಮಾತೃದೇವೋಭವ' ನಮ್ಮ ಸಂಸ್ಕೃತಿ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ನಮ್ಮ ದೇಶದ ನಾರೀ ಶಕ್ತಿಯೇ ಮೇಲ್ಪಂಕ್ತಿ. ನಮ್ಮ ಬೃಹಚ್ಚರಣ ಸಮುದಾಯದಲ್ಲಿ ಮಹಿಳಾ ಸಾಧಕಿಯರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದು ನಮ್ಮ ಕರ್ತವ್ಯ.

ಬೃಹಚ್ಚರಣರ ಪ್ರತೀ ಮನೆಯಲ್ಲೂ ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆಗಳ ಸಂಸ್ಕೃತಿ ಮುಂದುವರೆದಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಮಹಿಳೆಯರು ಬ್ಯಾಂಕ್, ವಿಜ್ಞಾನ, ವೈದ್ಯಕೀಯ, ವಕೀಲಿ, ಇಂಜಿನಿಯರಿಂಗ್, ವ್ಯಾಪಾರ ಕ್ಷೇತ್ರದಲ್ಲೂ ಕಾಣಿಸುತ್ತಿರುವುದು, ಸರ್ಕಾರಿ ಉದ್ಯೋಗದ ಉನ್ನತ ಹುದ್ದೆಯಲ್ಲಿರುವುದು ಹೆಮ್ಮೆಯ ವಿಷಯ.

ಹಿಂದಿನ ಕೆಲವು ನಮ್ಮ ಸಾಧಕಿಯರ ಸೇವೆ ಸ್ಮರಿಸಬೇಕಾಗಿದೆ. 70 ವರ್ಷಗಳ ಹಿಂದೆ ವಿಶ್ವೇಶ್ವರಪುರದಲ್ಲಿ ನೆಲಸಿದ್ದ ದಿವಂಗತ ಅಮ್ಮಣ್ಣಮ್ಮನವರು ಬಾಲವೈಧವ್ಯವಿದ್ದರೂ ಪ್ರಸೂತಿ ತಜ್ಞೆಯಾಗಿ ಹೆಸರುವಾಸಿಯಾಗಿದ್ದವರು, ಮಿಡ್ ವೈಫ್ ಅಮ್ಮಣ್ಣಮ್ಮ ಎಂದೇ ಕರೆಸಿಕೊಳ್ಳುತ್ತಿದ್ದರು. ಅಂತೆಯೇ ಗುಂಜೂರು ಜಿ.ಎಸ್.ಅನಸೂಯಮ್ಮ ವಕೀಲಿ ವೃತ್ತಿಯಲ್ಲೂ, ಚಾಮರಾಜಪೇಟೆಯ ಡಾ॥ ವಿ.ಎಸ್.ಲಕ್ಷ್ಮೀ ವೈದ್ಯಕೀಯ ಕ್ಷೇತ್ರದಲ್ಲಲ್ಲದೆ 'ವಿಜಯಭಾರತಿ' ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿರುವ ಉದಾಹರಣೆಗಳಿವೆ. ಈ ರೀತಿ ಸಾರ್ವಜನಿಕ ಸೇವೆಯಲ್ಲಿ ತೊಡಗಿದ ನಮ್ಮವರಿಗೆಲ್ಲಾ ಗೌರವಯುತ ಪ್ರಣಾಮಗಳು.

ಮಲೇಶಿಯಾ–ಸಿಂಗಾಪುರದಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಶ್ರೀಮತಿ ಮಲ್ಲಿಕಾ ರವಿಶಂಕರ್‌ರವರು ಹಾಗೂ ಅಮೇರಿಕಾದಲ್ಲಿ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಶ್ಲಾಘನೀಯ ಸೇವೆಗೈದಿರುವ ಗಾಯತ್ರಿ ರಾಜಾಪುರ್ ನಮ್ಮೊಂದಿಗಿದ್ದಾರೆ ಎಂಬುದು ಸಂತೋಷ. ಭಾರತ ಸರ್ಕಾರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ರಸಾಯನಶಾಸ್ತ್ರ ವಿಭಾಗದಲ್ಲಿ ಕೆಲಸನಿರ್ವಹಿಸಿರುವ ಡಾ॥ ಎಸ್.ಕೆ.ವಿಜಯಲಕ್ಷ್ಮಮ್ಮ ನವರು ಎಲೆಮರೆಯ ಕಾಯಿಯಂತಿರುವುದು ಹೆಮ್ಮೆಯ ವಿಷಯ.

ವಿದ್ಯಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿರುವ 35 ಸಾಧಕಿಯರನ್ನು ಬೃಹಚ್ಚರಣ ಸಂಘವು ತಾ. 11.9.2016ರಂದು ಶಿಕ್ಷಕರ ದಿನಾಚರಣೆ ಅಂಗವಾಗಿ ಗುರುತಿಸಿ ಗೌರವಿಸಿರುವುದನ್ನು ನೆನಪಿಸಿಕೊಳ್ಳಬೇಕಾಗಿದೆ. ಬೃಹಚ್ಚರಣ ಯುವಜನಾಂಗದ ಡಾ॥ ಸುಮಾ ಪ್ರಹ್ಲಾದ್, ಡಾ॥ ರೇಖಾ ವೇಣುಗೋಪಾಲ್, ಡಾ॥ ರಮಾ ಗುರುಪ್ರಸಾದ್ ವೈದ್ಯಕೀಯ ಕ್ಷೇತ್ರದಲ್ಲಿ ಸಮಾಜ ಸೇವೆ ಸಲ್ಲಿಸುತ್ತಿದ್ದಾರೆ.


ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಪ್ರತೀ ಸುಸಂಸ್ಕೃತ ಮಹಿಳೆಗೂ ಶುಭ ಕಾಮನೆಗಳು.

**ಸರಸ್ವತೀ ನಟರಾಜನ್**

# ಉಚಿತ ಬ್ರಹ್ಮೋಪದೇಶ

ಕಿತ್ತಾನಹಳ್ಳಿ ಸಹೃದಯ ಮಿತ್ರವೃಂದದಿಂದ 30.4.2017ರ ಶಂಕರ ಜಯಂತಿಯಂದು ಚಂದಾಪುರದ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ಉಚಿತ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಉಚಿತವಾಗಿ ಬ್ರಹ್ಮೋಪದೇಶ ನೆರವೇರಿಸಲಾಗುವುದು. ಆಸಕ್ತರು ಸತ್ಯನಾರಾಯಣ, ದೂರವಾಣಿ ಸಂಖ್ಯೆ : 9980945699 ಸಂಪರ್ಕಿಸಬಹುದಾಗಿದೆ.

## ನೆನಪಿನಂಗಳ ಚಿತ್ರ 29-30



ಶ್ರೀ ಶೇಷಾಚಲ ಹಾಗೂ ಶ್ರೀಮತಿ ಗಾಯತ್ರಿಯವರ ವಿವಾಹ 22.06.1970, ಬಂಡಕೊಡಗಿನಹಳ್ಳಿ ಕುಟುಂಬ

ಕೃಪೆ : ಗಾಯತ್ರಿ ಶೇಷಾಚಲ



ಸಂಘದ ಸ್ಥಾಪಕ ಅಧ್ಯಕ್ಷ ಚೂಡಸಂದ್ರದ ಶ್ರೀ ಶ್ರೀಕಂಠೇಶ್ವರ್‌ರವರ ಪುತ್ರಿ ಶ್ರೀಮತಿ ಇಂದಿರಾ ಹಾಗೂ ಶ್ರೀ ಸೂರ್ಯಪ್ರಕಾಶ್ ವಿವಾಹ. 24.02.1975

ಕೃಪೆ : ಪ್ರಶಾಂತ್ ಆರ್.ಎಸ್.

# ಒಳ್ಳೆಯ ವಿದ್ಯಾರ್ಥಿ ಹೇಗಿರಬೇಕು?

**ಚೆ**ನ್ನಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಹೇಗಿದ್ದಾರೆ ಎಂಬುದನ್ನು ತಿಳಿಯಲು ಇಲ್ಲಿ ಕೆಲವು ಸೂಚನೆಗಳಿವೆ, ಗಮನಿಸಿ. ಪ್ರತೀ ಶಿಕ್ಷಕರೂ ಈ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಹೇಳಬೇಕು.

| | |
|---|---|
| V- Vision | ದೂರದೃಷ್ಟಿ, |
| I- Interest | ಆಸಕ್ತಿ, |
| D- Discipline | ಶಿಸ್ತು |
| Y- Yearning | ಬಲವಾದ ಹಂಬಲ, |
| A- Academic Skills | ವಿದ್ಯೆಗೆ ಸಂಬಂಧಿಸಿದ ಕೌಶಲ್ಯಗಳು, |
| R- Right attitude | ಸರಿಯಾದ ಮನೋಭಾವ, |
| T- Time Management | ಸಮಯ ನಿರ್ವಹಣೆ |
| H- Humility | ವಿನಯ, |
| I- Industriousness | ನಿರಂತರ ಶ್ರಮ. |

ಮೇಲಿನ ಪದಗಳ ಮೊದಲಕ್ಷರವನ್ನು ಜೋಡಿಸಿದರೆ 'vidyarthi' ಎಂದಾಗುತ್ತದೆ. ವಿದ್ಯಾರ್ಥಿಗಳಲ್ಲಿ ಈ ಒಂಬತ್ತು ಲಕ್ಷಣಗಳಿರಬೇಕು.

**ದೂರದೃಷ್ಟಿ :** ವಿದ್ಯೆಯಲ್ಲಿ ಯಶಸ್ಸು ಸಾಧಿಸಲು ವಿದ್ಯಾರ್ಥಿಗೆ ಮೊದಲು ಬೇಕಾಗಿರುವುದು ದೂರದೃಷ್ಟಿ. ಓದಿನಿಂದಾಗಿ ಏನನ್ನು ಸಾಧಿಸಬೇಕೆಂದಿದೆ ಎಂಬುದನ್ನು ಮೊದಲು ಯೋಚಿಸಿಕೊಳ್ಳಬೇಕು. ಓದಿದರೆ ಬರುವ ಲಾಭ ಗಳನ್ನು, ಓದದಿದ್ದರೆ ಆಗುವ ನಷ್ಟಗಳನ್ನು ಊಹಿಸಿಕೊಳ್ಳುವಂತಿರಬೇಕು. ನಾವು ಓದುವುದು ನಮಗಾಗಿಯೇ ಹೊರತು ತಾಯಿ ತಂದೆಯರಿಗಾಗಿ ಅಲ್ಲ ಎಂಬ ಸತ್ಯವನ್ನು ಗ್ರಹಿಸಬೇಕು. ನಮ್ಮ ಓದಿಗೆ ತಕ್ಕ ಪ್ರೋತ್ಸಾಹವನ್ನು ಕೊಡುವ ಹಿರಿಯರು, ತಂದೆ-ತಾಯಿ ಇರುವುದು ಅದೃಷ್ಟವೆಂದು ಭಾವಿಸಬೇಕು. ಅಂತಹ ಆಸರೆಯಿಲ್ಲದಿದ್ದರೂ ಅದ್ಭುತಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು.

**ಆಸಕ್ತಿ :** ದೀಪಕ್ಕೆ ಎಷ್ಟು ದೊಡ್ಡ ಬತ್ತಿಯಿದ್ದರೂ ಎಣ್ಣೆಯಿಲ್ಲದೆ ಬೆಳಗದು. ಈ ಆಸಕ್ತಿ ಎಣ್ಣೆಯಂತೆ. ಓದಲು ಎಲ್ಲಾ ರೀತಿಯ ಅವಕಾಶಗಳಿದ್ದರೂ, ಎಲ್ಲರ ಪ್ರೋತ್ಸಾಹವಿದ್ದರೂ ವಿದ್ಯಾರ್ಥಿಗೆ ಓದಬೇಕೆಂಬ ಆಸಕ್ತಿ ಇರಬೇಕು. ಕುದುರೆಯನ್ನು ನೀರಿನ ಬಳಿಗೆ ತೆಗೆದುಕೊಂಡು ಹೋಗಬಹುದೇ ವಿನ: ಬಲವಂತವಾಗಿ ಕುಡಿಸಲಾರದಲ್ಲವೇ? ಆದ್ದರಿಂದ ಪ್ರತೀ ವಿದ್ಯಾರ್ಥಿಯು ತನಗೆ ತಾನೇ ಪ್ರೇರಣೆ ಒದಗಿಸಿಕೊಳ್ಳುತ್ತಾ ಓದಿನ ಮೇಲೆ ಶ್ರದ್ಧೆ ಬೆಳೆಸಿಕೊಂಡು ಮುನ್ನಡೆಯಬೇಕು.

ಓದುವ ಪಾಠವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅಗತ್ಯವಾದ ಯುಕ್ತಿಗಳನ್ನು ಉಪಯೋಗಿಸುತ್ತಾ ಆಸಕ್ತಿ ಬೆಳಸಿಕೊಳ್ಳಬೇಕು. ಓದಬೇಕೆಂಬ ಆಸಕ್ತಿಯಿದ್ದರೆ ಓದುವ ಶಕ್ತಿಯನ್ನು ಸುಲಭವಾಗಿ ಪಡೆಯಬಹುದು.

**ಶಿಸ್ತು :** ವಿದ್ಯಾಭ್ಯಾಸ ಮಾಡುವವರಿಗೆ ಶಿಸ್ತು ಬೇಕೇ ಬೇಕು. ಓದಿ ಕೊಳ್ಳುವ ಸಮಯದಲ್ಲಿ ಕೆಲವು ಆಸಕ್ತಿಗಳಿರಬಹುದೇ ಹೊರತು ಸರಸ ಗಳಿರಬಾರದು. ಅವು ಕೊನೆಗೆ ಓದನ್ನು ಸಮಾಧಿ ಮಾಡುತ್ತದೆ. ಶಿಕ್ಷಕರನ್ನು ಗೌರವಿಸುತ್ತಾ, ಹಿರಿಯರ ಬಗೆಗೆ ಗೌರವದಿಂದಿರುತ್ತಾ ಜ್ಞಾನವನ್ನು ಸಂಪಾದಿಸಬೇಕು. ಗೂಂಡಾಗಿರಿ, ದಾದಾಗಿರಿ ಮಾಡುತ್ತಾ ಹೀರೋಗಳಂತೆ ವರ್ತಿಸುವವರನ್ನು, ಮನಬಂದಂತೆ ಖರ್ಚು ಮಾಡುವವರನ್ನು, ಫ್ಯಾಷನ್ ಪೆರೇಡಿಗೆ ಬಂದಿರುವಂತೆ ಚಿತ್ರ-ವಿಚಿತ್ರ ಉಡುಪು ಧರಿಸಿರುವವರನ್ನು ದೂರವಿಡುವುದು ಒಳ್ಳೆಯದು. ನಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ನಮ್ಮ ಬಲಹೀನತೆಗಳನ್ನು ಜಯಿಸ ಬೇಕು. ಇಲ್ಲವಾದರೆ ಮತ್ತೊಬ್ಬರು ನಮ್ಮನ್ನು ಜಯಿಸುವುದು ಖಂಡಿತ." `Best victory is to conquer self' ಎನ್ನುತ್ತಾನೆ ಪ್ಲೇಟೊ.

**ಬಲವಾದ ಹಂಬಲ :** ಯಾವ ಕೆಲಸ ಮಾಡಬೇಕಾದರೂ ಭದ್ರ ಬುನಾದಿ ಇರಬೇಕು. ಏನೋ ಕಾಟಚಾರಕ್ಕೆ ಓದುವವರು ಯಶ ಗಳಿಸ ಲಾರರು. ತಾನೊಬ್ಬ ಪಾತ್ರಧಾರಿಯಾಗಿಯೇ ಉಳಿಯದೇ ಸೂತ್ರಧಾರಿ ಯಾಗಬೇಕೆಂದರೆ ಬಲವಾದ ಹಂಬಲ ಇರಬೇಕು. ನಿಜ ಹೇಳಬೇಕೆಂದರೆ ಈ ಕಾಲದಲ್ಲಿ ಓದಿಕೊಳ್ಳುವ ಇಚ್ಛೆ ಬಹಳ ಬೆಳೆದಿರುವುದರಿಂದ ಓದಿಕೊಳ್ಳುವುದನ್ನು ಚೆನ್ನಾಗಿ ಬೆಳೆಸಿಕೊಳ್ಳಬೇಕು.

**ಶಿಕ್ಷಣಕ್ಕೆ ಸಂಬಂಧಿಸಿದ ನೈಪುಣ್ಯಗಳು :** ಇತ್ತೀಚಿನ ದಿನಗಳಲ್ಲಿ ಅಂತರ್ಜಾಲ ಸೌಲಭ್ಯದಿಂದಾಗಿ ಅಧ್ಯಯನ ಕೌಶಲದಿಂದ ಇತರ ಕೌಶಲ್ಯಗಳೂ ಎಷ್ಟೋ ಲಭ್ಯವಾಗುತ್ತಿವೆ. ಹೇಗೆ ಓದಬೇಕು? ಯಾವಾಗ ಓದಬೇಕು? ಇಂತಹ ವಿಷಯಗಳ ಜೊತೆಗೆ ವಿಶ್ವವ್ಯಾಪ್ತಿ ಯಲ್ಲಿ ಎಂತಹ ಕೋರ್ಸುಗಳಿವೆ? ಇಂತಹ ವಿಷಯಗಳು ಕೂಡ ಒಂದು ಗುಂಡಿಯನ್ನು ಒತ್ತಿದರೆ ನಮ್ಮ ಮುಂದಿರುತ್ತದೆ. ಈ ಅವಕಾಶವಿಲ್ಲದವರು ಶಿಕ್ಷಕರು ಹೇಳಿದುದನ್ನು ಶ್ರದ್ಧೆಯಿಂದ ಕೇಳಬೇಕು. ಅರ್ಥವಾಗದಿದ್ದಲ್ಲಿ ಪ್ರಶ್ನೆ ಕೇಳಬೇಕು.

**ಯುಕ್ತ ಮನೋಭಾವ:** It is your attitude, not the aptitude that decides your success ಎಂದಿದ್ದಾನೆ ಜೆಸ್ಸಿ ಜಾಕ್ಸನ್. ಯಶಸ್ಸು ಗಳಿಸಲು ಕೇವಲ ಆಸಕ್ತಿಯೇ ಅಲ್ಲ, ತಕ್ಕ ಮನೋಭಾವ ಕೂಡ ಇರಬೇಕು. ಓದಿಕೊಳ್ಳ ಬೇಕೆಂಬ ಮನೋಭಾವವಿದ್ದಾಗಲೇ ಓದಿನ ಬಗ್ಗೆ ಆಸಕ್ತಿ ಬೆಳೆಯುತ್ತದೆ. ಜಯ-ಅಪಜಯಗಳ ಮೂಲ ನಮ್ಮ ಮನೋ ಭಾವವೇ. ಹಿಂದಿನ ಮಾತು ಹೇಗೇ ಇದ್ದರೂ ಭವಿಷ್ಯವನ್ನು ತಿದ್ದಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದು ವಿದ್ಯಾರ್ಥಿಗೆ ಒಳ್ಳೆಯದು.

**ಸಮಯ ಪಾಲನೆ :** ಪ್ರತೀ ವಿದ್ಯಾರ್ಥಿಯು ಸಮಯವನ್ನು ಸದ್ವಿನಿ ಯೋಗ ಮಾಡಿಕೊಳ್ಳುವುದನ್ನು ಕಲಿಯಬೇಕು. ಸಮಯವನ್ನು ಹಾಳು ಮಾಡದೆ, ಆರೋಗ್ಯವನ್ನು ಕಾಪಾಡಿಕೊಂಡು ಮುನ್ನಡೆಯಬೇಕು. ಈಗ ಕಷ್ಟಪಟ್ಟರೆ ಮುಂದೆ ಸುಖ ದೊರೆಯುತ್ತದೆ. ಈಗಲೇ ಸುಖ ಅನುಭವಿಸಿದರೆ ಮುಂದೆ ಕಷ್ಟ ಅನುಭವಿಸಬೇಕಾಗುತ್ತದೆ.

**ವಿನಯ :** 'ವಿದ್ಯಾರ್ಥಿಗೆ ವಿನಯವೇ ಭೂಷಣ' ಎನ್ನುತ್ತಾರೆ. ಶಿಕ್ಷಕರು, ಹಿರಿಯರ ಬಗೆಗೆ ವಿನಯದಿಂದ ವರ್ತಿಸಿದರೆ ಅವರ ಪ್ರಶಂಸೆಗೆ ಪಾತ್ರರಾಗಬಹುದು.

**ನಿರಂತರ ಶ್ರಮ :** ಸತತವಾಗಿ ಓದುವುದು ಬಹಳ ಮುಖ್ಯ. ಓದುವುದು ಎಂದರೆ ವಿಷಯ ಸಂಗ್ರಹವಲ್ಲ. ಪರೀಕ್ಷೆಯಲ್ಲಿ ಉತೀರ್ಣರಾಗುವುದಲ್ಲ. ಜೀವನದಲ್ಲಿ ಕೂಡ ಅದರ ಪರಿಚಯ ನಮ್ಮ ಮೇಲೆ ಪ್ರಭಾವ ಬೀರುತ್ತದೆ" there is no shortcut to success except hardwork ಎನ್ನುತ್ತಾರೆ ದೊಡ್ಡವರು.

ವಿದ್ಯಾರ್ಥಿ ಜೀವನ ಒಮ್ಮೆ ಮಾತ್ರ ಬರುತ್ತದೆ. ಆ ಸಮಯದಲ್ಲಿ ಉತ್ಸಾಹದಿಂದ, ಉಲ್ಲಾಸದಿಂದ ಮೇಲಿನ ಲಕ್ಷಣಗಳನ್ನು ಪಾಲಿಸ ಬಹುದು. ಚೆನ್ನಾಗಿ ಅಭ್ಯಾಸ ಮಾಡುವುದರಿಂದ ವಿದ್ಯೆ ಲಭಿಸುತ್ತದೆ ಮತ್ತು ದೊಡ್ಡ ಸ್ಥಾನ ಸಮಾಜದಲ್ಲಿ ದೊರೆಯುತ್ತದೆ. ವಿದ್ಯಾರ್ಥಿಗಳು ಧನಾತ್ಮಕ ಚಿಂತನೆಯನ್ನು ಮಾಡಿ ಉನ್ನತಿಯನ್ನು ಹೊಂದಬೇಕು.

**ಎಸ್. ಶ್ರೀನಿವಾಸಯ್ಯ**
**ನಿವೃತ್ತ ಪ್ರಾಂಶುಪಾಲರು, ಕಿತ್ತಗಾನಹಳ್ಳಿ**
**7899318098**



## ಸುದ್ದಿ ಮನೆ

ನಮ್ಮ ಸಂಘದ ಸ್ಥಾಪಕ ಸದಸ್ಯರಾದ ಪಂಡಿತ್ ಶೇಷಾದ್ರಿ ಗವಾಯಿಯವರ 93ನೇ ಜನ್ಮದಿನ ಹಾಗೂ ಪುಣ್ಯತಿಥಿಯ ಅಂಗವಾಗಿ ಬೆಂಗಳೂರಿನ ಸಂಗೀತ ಕೃಪಾ ಕುಟೀರದ ಆಶ್ರಯದಲ್ಲಿ ತಾ.12.3.2017 ರಂದು ಅವರ ಶಿಷ್ಯ ವಿದ್ವಾನ್ ಗುಂಡಪ್ಪ ಶಾಸ್ತ್ರೀ, ಆಧ್ಯಾತ್ಮ ಚಿಂತಕಿ ಶ್ರೀಮತಿ ಭ್ರಮರಾ ಗೋಪಿನಾಥ್ ವಿದೂಷಿ ಸರಸ್ವತೀ ನಟರಾಜ್ ಹಾಗೂ ಶಿಷ್ಯ ವೃಂದದವರಿಂದ ಗವಾಯಿಯವರ ರಚನೆಗಳ ಸಂಗೀತ ಕಾರ್ಯಕ್ರಮ ಹಾಗೂ ನುಡಿನಮನ ಏರ್ಪಡಿಲಾಗಿತ್ತು. ಇದೇ ಸಂದರ್ಭದಲ್ಲಿ ಪಂಡಿತ್ ಗವಾಯಿಯವರ ಹಾರ್ಮೋನಿಯಂ ವಾದನದ ಸಿಡಿ ಉಚಿತವಾಗಿ ವಿತರಿಸಲಾಯಿತು.

* * *

ಬೃಹಚ್ಚರಣ ಸಮುದಾಯದವರ ಮೂಲಸ್ಥಳವಾದ ಮಂಜಪತ್ತೂರು ಈಗಿನ ತಮಿಳುನಾಡಿನ ವಿಳ್ಳುಪುರಂನ ಚೋಲಂಪಟ್ಟು ಎಂಬ ಸ್ಥಳ ವಾಗಿದೆ. ನಮ್ಮ ಸಂಘದ ಸದಸ್ಯರಾದ ರಾಚಮಾನಹಳ್ಳಿಯ ಶ್ರೀ ಗುರು ಪ್ರಸಾದ್‌ರವರು ಇತ್ತೀಚಿಗೆ ಈ ಸ್ಥಳಕ್ಕೆ ಭೇಟಿ ನೀಡಿದ್ದರು. ಇಂದಿಗೂ ಇಲ್ಲಿ ಬೃಹಚ್ಚರಣ ಸಮುದಾಯದ ಮೂರು ಕುಟುಂಬದವರು ವಾಸಿಸುತ್ತಿದ್ದು, ಇಲ್ಲಿ ಒಂದು ಶಿವಾಲಯವು ಇದೆ ಎಂದು ತಿಳಿಸಿದ್ದಾರೆ. ಶ್ರೀಯುತರು ಚೆನ್ನೈನ ಎಸ್.ಬಿ.ಐ.ನಲ್ಲಿ ಡಿ.ಜಿ.ಎಂ. ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪ್ರಸಿದ್ಧ ಗಮಕಿಗಳಾದ ಶ್ರೀ ಶಂಕರನಾರಾಯಣ್‌ರವರ ಪುತ್ರರಾಗಿದ್ದಾರೆ.

### ಸಂಘದ ಅಭಿನಂದನೆ

ಸದಸ್ಯೆ ಶ್ರೀಮತಿ ಭ್ರಮರಾ ಗೋಪಿನಾಥ್‌ರವರು ರಚಿಸಿರುವ 'ಸಂಗೀತ ಗುಚ್ಛ' ಭಾಗ–1, 192 ಪುಟಗಳ 250 ಕೃತಿಗಳು ಮತ್ತು ಭಾಗ–2, 504 ಪುಟಗಳ, 592 ಕೃತಿ ರಚನೆಗಳನ್ನು ಕೀರ್ತನ ಪ್ರಕಾಶನವು ಕರ್ನಾಟಕ ಸರ್ಕಾರದ ಗ್ರಂಥಾಲಯ ಇಲಾಖೆಯ ಸಹಯೋಗದೊಂದಿಗೆ ಪ್ರಕಟಿಸಿದೆ. ಸಂಘವು ಶ್ರೀಮತಿ ಭ್ರಮರಾ ಗೋಪಿನಾಥ್‌ರವರನ್ನು ಅಭಿನಂದಿಸುತ್ತದೆ.




ಸಂಘದ ಸದಸ್ಯರಾದ ಶ್ರೀಮತಿ ಮತ್ತು ಶ್ರೀ ಎಸ್.ಆರ್.ವಿಜಯ್ ಕುಮಾರ್‌ರವರ ಪುತ್ರಿ ರಮ್ಯಾರವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 'ಇನ್ಫರ್ಮೇಶನ್ ಟೆಕ್ನಾಲಜಿ' ವಿಭಾಗದಲ್ಲಿ ಎರಡು ಬಂಗಾರದ ಪದಕ ಪಡೆಯುವ ಮೂಲಕ ಮೊದಲನೆ ರ್‍ಯಾಂಕ್ ಪಡೆದಿರುತ್ತಾರೆ.

ಸಂಘದ ಸದಸ್ಯೆ ಶ್ರೀಮತಿ ಸುಷ್ಮಾ ರಘುನಂದನ್‌ರವರು 'ಭಾಷಾಂತರೀ ಕರಿಸಿದ ನಾಟಕಗಳು' ವಿಷಯವಾಗಿ ಮಂಡಿಸಿರುವ ಪ್ರಬಂಧಕ್ಕೆ ಹಂಪಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

## ಸಂಘದ ಶುಭಾಶಯಗಳು

ಶ್ರೀಮತಿ ಮಂಜುಳಾ ಪ್ರಕಾಶ್ ಮತ್ತು ಶ್ರೀ ಕೆ.ಎಸ್.ಪ್ರಕಾಶ್‌ರವರ ಪುತ್ರಿ ಚಿ.ದೀಪ್ತಿ ಪ್ರಕಾಶ್‌ರವರ ವಿವಾಹವು ಶ್ರೀಮತಿ ಪಿ.ರಮಾ ಮತ್ತು ಶ್ರೀ ಎಂ.ಎಸ್.ಅರುಣಾಚಲರವರ ಪುತ್ರ ಚಿ.ಕಿರಣ್‌ಕುಮಾರ್ ರವರೂಂದಿಗೆ ಬೆಂಗಳೂರಿನಲ್ಲಿ ದಿ.1.2.2017ರಂದು ನೆರವೇರಿತು.

* * *

ಶ್ರೀಮತಿ ಸುಬ್ಬಲಕ್ಷ್ಮೀ ಮತ್ತು ಶ್ರೀ ಕೆ.ಜಿ.ಸುಂದರ್‌ರವರ ಪುತ್ರ ಚಿ. ಎಸ್. ವೇಣುಗೋಪಾಲ್‌ರವರ ವಿವಾಹವು ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ವ್ಯಾಸಮೂರ್ತಿ ಪಂಚಮುಖಿರವರ ಪುತ್ರಿಯಾದ ಚಿ. ವಿಜಯೀತ ರವರೊಡನೆ ದಿನಾಂಕ 1.2.2017ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಶ್ರೀಮತಿ ವಸುಂದರ ಮತ್ತು ಶ್ರೀ ಹೆಚ್.ಡಿ.ಗಣೇಶ್‌ರವರ ಪುತ್ರಿ ಹೆಚ್.ಜಿ.ಆಶಾರವರ ವಿವಾಹವು ಶ್ರೀಮತಿ ವಿಶಾಲಾಕ್ಷಿ ಮತ್ತು ಶ್ರೀ ಬಿ.ಕೆ.ಗುರುಪ್ರಸಾದ್‌ರವರ ಪುತ್ರ ಚಿ. ಬಿ.ಜಿ.ಶ್ರೇಯಸ್‌ರವರೊಂದಿಗೆ ದಿನಾಂಕ 17.2.2017ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಶ್ರೀಮತಿ ಎನ್.ಅಮೃತ ಮತ್ತು ಶ್ರೀ ಎಸ್.ಬಾಲಸುಬ್ರಮಣಿರವರ ಪುತ್ರ ಚಿ. ಬಿ.ರಾಘವರವರ ಬ್ರಹ್ಮೋಪದೇಶವು ದಿ.6.2.2017ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಶ್ರೀಮತಿ ಸುಧಾ ಕಿರಣ್ ಮತ್ತು ಶ್ರೀ ಕಿರಣ್‌ರವರ ಪುತ್ರ ಸಂಘದ ಸದಸ್ಯ ಚಿ.ಸ್ಕಂದ ಕಿರಣ್‌ರವರ ಬ್ರಹ್ಮೋಪದೇಶವು ದಿ.1.3.2017ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸಂಘದ ಹಿರಿಯ ಸದಸ್ಯರಾದ ಶ್ರೀ ಛಾಯಾಪತಿ ಮತ್ತು ಶ್ರೀಮತಿ ಸೀತಾ ಲಕ್ಷ್ಮೀಯವರ ಮೊಮ್ಮಗ ಮತ್ತು ಸದಸ್ಯ ಶ್ರೀಧರ್ ಮತ್ತು ಶ್ರೀಮತಿ ವಿದ್ಯಾ ರವರ ಪುತ್ರ ಚಿ.ಇಶಾಂತ್‌ಶ್ರೀಯ 2ನೇ ವರ್ಷದ ಹುಟ್ಟಿದ ದಿನವನ್ನು ದಿನಾಂಕ 16.2.2017ರಂದು ಕಿತ್ತಿಗಾನಹಳ್ಳಿಯಲ್ಲಿ ಆಚರಿಸಲಾಯಿತು.

* * *

ಪಂಡಿತ್ ಶೇಷಾದ್ರಿ ಗವಾಯಿಯವರ ಮೊಮ್ಮಗ ಅನಿಲ್ ಸೇಲಂ (ಡಾ. ಅನಸೂಯಾ ಮತ್ತು ಶ್ರೀ ಕೃಷ್ಣಸ್ವಾಮಿರವರ ಪುತ್ರ) ನ್ಯೂಯಾರ್ಕ್ ಅಪೊಲೊ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮ ನೀಡಿರುತ್ತಾರೆ.

* * *

ಸದಸ್ಯ ಹೆಚ್.ವಿ. ಜಯರಾಮ್‌ರವರ ಪತ್ನಿ **ಶ್ರೀಮತಿ ವಿದ್ಯಾ ಜಯರಾಮ್** ಹಾಗೂ ಸದಸ್ಯ **ಶ್ರೀ ಕೆ.ಬಿ. ಸುರೇಶ್**ರವರಿಗೆ ಅರವತ್ತು ವರ್ಷ ತುಂಬಿದ ಸಂದರ್ಭಕ್ಕಾಗಿ ಅಭಿನಂದನೆ.

## ಮರೆಯಾದ – ಮರೆಯಲಾಗದವರು
## ಸಂಘದ ಶ್ರದ್ಧಾಂಜಲಿ

**ಎ.ವಿ.ಸುಂದರ್** (87) (18.1.2017). ಸಂಘದ ಸದಸ್ಯರಾದ ಎ.ಎಸ್.ರವಿಶಂಕರ್, ಎ.ಎಸ್.ವೈದ್ಯನಾಥ್‌ರವರ ತಂದೆ.
**ಎಚ್. ಸತ್ಯಮೂರ್ತಿ** (7.2.2017), (91), ಪೋಷಕ ಎಚ್.ಕೃಷ್ಣಸ್ವಾಮಿಯವರ ಸಹೋದರ.
**ಆನಂದರಾಮ್** (17.2.2017) ಸದಸ್ಯ ವಿ. ಸುನಿಲ್ ಸೋದರಮಾವ
**ಸುನಂದ ರಾಧಾಕೃಷ್ಣ** (80) 25.03.2017, ಮೈಸೂರು.
**ಸದಸ್ಯ ಅಟ್ಟೂರು ಗುರುರಾವ್** (71) 29.03.2017, ಕಾಚರಕನಹಳ್ಳಿ ಭೀಮಣ್ಣನವರ ಅಳಿಯ ಹಾಗೂ ಎ.ಜಿ. ರಘುನಂದನ್ ಅವರ ತಂದೆ

## ಬೃಹಚ್ಚರಣ ಮೂಲಸ್ಥಳಗಳು

ನಿಮಗಿದು ತಿಳಿದಿರಲಿ

| | |
|---|---|
| ಕಿತ್ತಿಗಾನಹಳ್ಳಿ | ಗೆರಟಿಗನಬೆಲೆ |
| ತಟ್ನಹಳ್ಳಿ | ಅಟ್ಟೂರು |
| ಶೆಟ್ಟಳ್ಳಿ | ಹೊಸಕೋಟೆ |
| ಮಟ್ನಹಳ್ಳಿ | ಸೋಮತ್ತಳ್ಳಿ |
| ಕಾಮನಹಳ್ಳಿ | ಜಕ್ಕೂರು |
| ಬೈಯ್ಯಪ್ಪನಹಳ್ಳಿ | ಹಿನ್ನಕ್ಕಿ |
| ಜಡಿಗೇನಹಳ್ಳಿ | ರಾಮಕೃಷ್ಣಾಪುರ |
| ಬ್ಯಾಗಡದೇನಹಳ್ಳಿ | ನಡವತ್ತಿ |
| ತ್ಯಾವಕನಹಳ್ಳಿ | ಬೂದುಗೆರೆ |
| ಬಂಡುಕೊಡಗನಹಳ್ಳಿ | ಹಸಿಗಾಳ |
| ರಾಚಮಾನಹಳ್ಳಿ | ಚೂಡಸಂದ್ರ |
| ನಲ್ಲಾಲು | ಬಿಲ್ಲಾಪುರ |
| ಕೂಗೂರು | ಜಗದೇಪುರ |
| ಮರಸೂರು | ಶಾವಕನಹಳ್ಳಿ |
| ಸಂಮ್ಮಂದೂರು | ಯಲಹಂಕ |
| ಯಮಲೂರು | ಶಿಡ್ಲಘಟ್ಟ |
| ಗುಂಜೂರು | ಬಳೇಪೇಟೆ |
| ಮುಗಳೂರು | ಮಾವಳ್ಳಿ |
| ಅಡೇಸನ್ನಟ್ಟಿ | ಅಕ್ಕಿತಿಮ್ಮನಹಳ್ಳಿ |
| ರಾಜಾಪುರ | ಮಾರೇನಹಳ್ಳಿ |
| ಆನೇಕಲ್ | ಅಲಸೂರುಪೇಟೆ |
| ಕೋಲಾರ | ಇಮ್ಮಡಹಳ್ಳಿ |
| ಕಬ್ಬನ್‌ಪೇಟೆ | ಮಾಮೂಲುಪೇಟೆ |
| ಸರ್ಜಾಪುರ | ಇಟ್ಟಂಗೂರು |
| ಹಲಸೂರು | ನಾಗವಾರಪಾಳ್ಯ |
| ಪ್ಯಾಲೆಸ್‌ಗುಟ್ಟಹಳ್ಳಿ | ಸಣ್ಣೆ ಸೇಲಂ (ಶಾಲ್ಯ) |
| ಕೊತ್ತಕೊಂಡಳ್ಳಿ | ಥಳೀಕೊತ್ತನೂರು |
| ಕಾಚರಕನಹಳ್ಳಿ | ಬೆಟ್ಟಕೋಟೆ |
| ಗುಮ್ಮಳಾಪುರ | ಅರೆಹಳ್ಳಿ |
| ಬಿನ್ನಮಂಗಲ | ತಿಂಡ್ಲು |

### ನಾಗಾರಾಧನೆಯ ಹುಂಡಿ ಹಣ ದೇಣಿಗೆ ನೀಡಿದವರು

***ಶ್ರೀಯುತರಾದ***

| | |
|---|---|
| ಅಶೋಕ್‌ಕುಮಾರ್ ಜಿ. | **1,749/–** |
| ರಮೇಶ್ ಆರ್. | **1,500/–** |
| ಕೇಶವಕುಮಾರ್ | **1,385/–** |
| ಆರ್.ಎಸ್. ವೆಂಕಟೇಶ್ | **725/–** |
| ಹರಿಣಿ | **646/–** |
| ರಾಜಲಕ್ಷ್ಮಿ ರಾಮಕೃಷ್ಣ | **550/–** |
| ರಮಾ | **436/–** |
| ನಾಗರಾಜ್ ಜಿ.ಎಸ್. | **430/–** |
| ಶೇಷಗಿರಿ | **300/–** |
| ವಿಶ್ವಾಸ್ | **290/–** |
| ಎಸ್.ಆರ್. ನಾಗಮಣಿ | **289/–** |

## ಕನ್ನಡ ಬಿರುದಾಂಕಿತರು

| | | |
|---|---|---|
| ದಾನ ಚಿಂತಾಮಣಿ | – | ಅತ್ತಿಮಬ್ಬೆ |
| ಕನ್ನಡ ಕುಲಪುರೋಹಿತ | – | ಆಲೂರು ವೆಂಕಟರಾಯರು |
| ಕನ್ನಡದ ಶೇಕ್ಸ್‌ಪಿಯರ್ | – | ಕಂದಗಲ್ ಹನುಮಂತರಾಯ |
| ಕನ್ನಡದ ಕೋಗಿಲೆ | – | ಪಿ.ಕಾಳಿಂಗರಾವ್ |
| ಕನ್ನಡದ ವರ್ಡ್ಸ್‌ವರ್ತ್ | – | ಕುವೆಂಪು |
| ಕಾದಂಬರಿ ಸಾರ್ವಭೌಮ | – | ಅ.ನ.ಕೃಷ್ಣರಾಯ |
| ಕರ್ನಾಟಕ ಪ್ರಹಸನ ಪಿತಾಮಹ | – | ಟಿ.ಪಿ.ಕೈಲಾಸಮ್ |
| ಕರ್ನಾಟಕದ ಕೇಸರಿ | – | ಗಂಗಾಧರರಾವ್ ದೇಶಪಾಂಡೆ |
| ಸಂಗೀತ ಗಂಗಾದೇವಿ | – | ಗಂಗೂಬಾಯಿ ಹಾನಗಲ್ |
| ನಾಟಕ ರತ್ನ | – | ಗುಬ್ಬಿ ವೀರಣ್ಣ |
| ಚುಟುಕು ಬ್ರಹ್ಮ | – | ದಿನಕರ ದೇಸಾಯಿ |
| ಅಭಿನವ ಪಂಪ | – | ನಾಗಚಂದ್ರ |
| ಕರ್ನಾಟಕ ಸಂಗೀತ ಪಿತಾಮಹ | – | ಪುರಂದರದಾಸರು |
| ಕರ್ನಾಟಕದ ಮಾರ್ಟಿನ್ ಲೂಥರ್ | – | ಬಸವಣ್ಣ |
| ಅಭಿನವ ಕಾಳಿದಾಸ | – | ಬಸವಪ್ಪ ಶಾಸ್ತ್ರಿ |
| ಕರ್ನಾಟಕದ ಆಸ್ತಿ | – | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| ಕನ್ನಡದ ದಾಸಯ್ಯ | – | ಶಾಂತಕವಿ |
| ಕಾದಂಬರಿ ಪಿತಾಮಹ | – | ಗಳಗನಾಥ |
| ತ್ರಿಪದಿ ಚಕ್ರವರ್ತಿ | – | ಸರ್ವಜ್ಞ |
| ಸಂತಕವಿ | – | ಪು.ತಿ.ನರಸಿಂಹಾಚಾರ್ |
| ಷಟ್ಪದಿ ಬ್ರಹ್ಮ | – | ರಾಘವಾಂಕ |
| ಸಾವಿರ ಹಾಡುಗಳ ಸರದಾರ | – | ಬಾಳಪ್ಪ ಹುಕ್ಕೇರಿ |
| ಕನ್ನಡದ ನಾಡೋಜ | – | ಮುಳಿಯ ತಿಮ್ಮಪ್ಪಯ್ಯ |
| ಕರ್ನಾಟಕ ಶಾಸನಗಳ ಪಿತಾಮಹ | – | ಬಿ.ಎಲ್.ರೈಸ್ |
| ಹರಿದಾಸ ಪಿತಾಮಹ | – | ಶ್ರೀಪಾದರಾಯರು |
| ಅಭಿನವ ಸರ್ವಜ್ಞ | – | ರೆ.ಉತ್ತಂಗಿ ಚೆನ್ನಪ್ಪ |
| ವಚನಶಾಸ್ತ್ರ ಪಿತಾಮಹ | – | ಫ.ಗು.ಹಳೆಕಟ್ಟಿ |
| ಕವಿ ಚಕ್ರವರ್ತಿ | – | ರನ್ನ |
| ಆದಿಕವಿ | – | ಪಂಪ |
| ಉಭಯ ಚಕ್ರವರ್ತಿ | – | ಪೊನ್ನ |
| ರಗಳೆಯ ಕವಿ | – | ಹರಿಹರ |
| ಕನ್ನಡದ ಕಣ್ವ | – | ಬಿ.ಎಂ.ಶ್ರೀಕಂಠಯ್ಯ |
| ಕನ್ನಡದ ಸೇನಾನಿ | – | ಎ.ಆರ್.ಕೃಷ್ಣಶಾಸ್ತ್ರಿ |
| ಕರ್ನಾಟಕದ ಉಕ್ಕಿನ ಮನುಷ್ಯ | – | ಹಳ್ಳಿಕೇರಿ ಗುದ್ಲೆಪ್ಪ |
| ವರಕವಿ | – | ದ.ರಾ.ಬೇಂದ್ರೆ |
| ಕುಂದರ ನಾಡಿನ ಕಂದ | – | ಬಸವರಾಜ ಕಟ್ಟೀಮನಿ |
| ಪ್ರೇಮಕವಿ | – | ಕೆ.ಎಸ್.ನರಸಿಂಹಸ್ವಾಮಿ |
| ಚಲಿಸುವ ವಿಶ್ವಕೋಶ | – | ಕೆ.ಶಿವರಾಮ ಕಾರಂತ |
| ಚಲಿಸುವ ನಿಘಂಟು | – | ಡಿ.ಎಲ್.ನರಸಿಂಹಚಾರ್ |
| ದಲಿತ ಕವಿ | – | ಸಿದ್ಧಲಿಂಗಯ್ಯ |
| ಅಭಿನವ ಭೋಜರಾಜ | – | ಮುಮ್ಮಡಿ ಕೃಷ್ಣರಾಜ ಒಡೆಯರ್ |
| ಪ್ರಾಕ್ತನ ವಿಮರ್ಶಕ ವಿಚಕ್ಷಣ | – | ಆರ್.ನರಸಿಂಹಚಾರ್ |
| ಕನ್ನಡದ ಕಬೀರ | – | ಶಿಶುನಾಳ ಶರೀಫ |
| ಕರ್ನಾಟಕದ ಗಾಂಧಿ | – | ಹರ್ಡೇಕರ್ ಮಂಜಪ್ಪ |
| ಭಾರತರತ್ನ | – | ಸರ್.ಎಮ್.ವಿಶ್ವೇಶ್ವರಯ್ಯ |
| ಅಮರಶಿಲ್ಪಿ | – | ಜಕಣಾಚಾರಿ |
| ನಟಸಾರ್ವಭೌಮ | – | ಡಾ|| ರಾಜಕುಮಾರ್ |
| ಕನ್ನಡದ ಕವಿರತ್ನ | – | ಕಾಳಿದಾಸ |



# ಮಂಕುತಿಮ್ಮನ ಕಗ್ಗ

ದೈವರಸ ತಂತ್ರ
ನಂಟು ತಂಟೆಗಳ ಗಂಟು ಈ ಬ್ರಹ್ಮ ಭಂಡಾರ
ಅಂಟಿಲ್ಲವೆನಗಿದರೊಳೆನ್ನಿದಿರೆದೆಂದುಂ
ಒಂಟಿ ನೀ ಒಳಜಗಕೆ ಭಂಟ ಹೊರಜಗಕಾಗಿ
ಒಂಟಿಸಿಕೋ ಜೀವನವ ಮಂಕುತಿಮ್ಮ ॥

ತೈತ್ತರೀಯ ಉಪನಿಷತ್ತಿನ ಬ್ರಹ್ಮಾನಂದವಲ್ಲಿಯಲ್ಲಿ ಜಗತ್ತಿನ ವಸ್ತುಗಳ ಪರಸ್ಪರ ಸಂಬಂಧವು ವಿವರಿಸಲ್ಪಟ್ಟಿದೆ. "ಆಕಾಶಾತ್ ವಾಯುಃ । ವಾಯೋರಾಗ್ನಿಃ । ಅಗ್ನೇರಾಪಃ । ಅದ್ಭ್ಯಃಪೃಥಿವೀ । ಪೃಥಿವ್ಯಾ ಓಷದರ್ಯ । ಓಷಧೀ ಭ್ಯೋನ್ನಮ್ । ಅನ್ನಾತ್ ಪುರುಷಃ । ಸವಾ ಏಷ ಪುರುಷೋನ್ನ ರಸಮಯಃ । ಎಂದು ಜಗತ್ತಿನ ವಸ್ತು ಗಳಲ್ಲಿರುವ ಪರಸ್ಪರ ಸಂಬಂಧವು ವಿವರಿಸಲ್ಪಟ್ಟಿದೆ. ಬ್ರಹ್ಮ ಸೃಷ್ಟಿಯಾದ ಆಕಾಶ–ಗಾಳಿ–ಸೂರ್ಯಕಿರಣಗಳಿಂದ ಶಾಖ–ಆವಿ–ಮೋಡ–ಗುಡುಗು–ಸಿಡಿಲು–ಮಳೆ–ಮಳೆಯಿಂದ ತಂಪಾದ ಇಳೆ. ಇಳೆಯಿಂದ ಬೆಳೆ ಬೆಳೆಯಿಂದ ಅನ್ನ ಆಹಾರ–ಆಹಾರದಿಂದ ಶಕ್ತಿ. ಶಕ್ತಿಯಿಂದ ಜಗತ್ತಿನ ವ್ಯಾಪಾರ. ಹೀಗೆ ಒಂದಕ್ಕೊಂದು ಕೊಂಡಿಯಾಗಿ ನಂಟು ಹಾಕಿದೆ. ಅದರಿಂದ ಎಲ್ಲಾ ಜೀವಿಗಳಿಗೂ ಉಪಯೋಗ ಎಲ್ಲಾ ಪ್ರಾಣಿಗಳಿಗೂ ಬದುಕುವಂತೆ ಪರಮಾತ್ಮ ಒಂದಕ್ಕೊಂದು ಬಾಂಧವ್ಯವನ್ನು ಬೆಳೆದಿದ್ದಾನೆ. ಈ ಬಾಂಧವ್ಯ ಸಕಲ ಜೀವರಾಶಿಗಳ ಅಸ್ತಿತ್ವಕ್ಕೆ ಪೂರಕವಾಗಿದೆ.

ಇದನ್ನೇ ಪೂಜ್ಯ ಡಿ.ವಿ.ಜಿ. ಅವರು ಈ ಬ್ರಹ್ಮಭಂಡಾರದಲ್ಲಿ ಬಾಂಧವ್ಯದ ಸಂಬಂಧದ ಬಂಧನಗಳು ಬೇಕಾದಷ್ಟು ಇದೆ ಎಂದಿದ್ದಾರೆ. ನಂತರ 'ಅಂಟಿಲ್ಲ ವೆನಗಿದರೊಳೆಂದೆಂದು' ಎಂದು ಹೇಳಿದ್ದಾರೆ. ನನಗೂ ಈ ನಂಟತನಕ್ಕೂ ಸಂಬಂಧವಿಲ್ಲ ಎಂದು ಹೇಳದಿರು ಎಂದು ಖಂಡಿಸಿದ್ದಾರೆ. ತಿಳಿವಳಿಕೆಯನ್ನು ನೀಡಿದ್ದಾರೆ. ಪ್ರಪಂಚಕ್ಕೂ ನಮಗೂ ಇರುವ ಬಾಂಧವ್ಯ ಅಥವಾ ನಂಟನ್ನು ಹೀಗೆ ಹೇಳುತ್ತಾರೆ. "ಎಲ್ಲೋ ಹುಟ್ಟಿರುವ ಹೆಸರನರಿಯದ ಸಸ್ಯಗಳು ಮಕರಂದ ಪರಿಮಳಗಳನ್ನು ಸೂರ್ಯ ತನ್ನ ಕಿರಣಗಳಿಂದ ಬಿಡಿಸುತ್ತಾನೆ... ಅದನ್ನೇ ವಾಯು ದಿಕ್ಕು ದಿಕ್ಕು ಗಳಿಗೆ ಪಸರಿಸುತ್ತಾನೆ. ಆ ಸುಗಂಧದ ವಾಯುವನ್ನೇ ನಾವು ಉಸಿರಾಡುತ್ತೇವೆ. ಇವು ಒಬ್ಬರಿಗೊಬ್ಬರಿಗೆ ಗೊತ್ತಿಲ್ಲದ ನಂಟು ಅಪರಿಚಿತವಾದರೂ ನಂಟುಗಳ ಸಂಬಂಧ ಇದೆ. ಅದರಂತೆಯೇ ಭೂಮಿಯಲ್ಲಿ ಅಂತರ್ಗತವಾಗಿರುವ ಜಲ ಮುಂತಾದ ರಸ... ಅದರ ಜೊತೆಯಲ್ಲಿ ವಾಸನೆಗಳೂ ಸೂರ್ಯನ ಶಾಖದ ಕಾರಣದಿಂದ ಆವಿಯಾಗಿ ಆಕಾಶಕ್ಕೆ ಹೋಗಿ ಮೋಡವಾಗಿ ಮಳೆಗೆರೆದು ಆ ಮಳೆಯಿಂದ ಭೂಮಿನೆಂದು ಇಂಗಿ, ಭಾವಿ ಅಥವಾ ಜಲಸಂಪತ್ತಿಗೆ ಚಿಲುಮೆಯನ್ನಿತ್ತು. ನರರ ಒಡಲ ಸೇರುತ್ತದೆ. ಇದನ್ನೇ ಡಿ.ವಿ.ಜಿ. ಅವರು ದೈವರಸ ತಂತ್ರ ಎನ್ನುತ್ತಾರೆ. ಇದೂ ಸಹ ಒಂದು ಅನ್ಯೋನ್ಯ ಸಂಬಂಧವಲ್ಲವೇ? ತರಣಿ–ಕಿರಣ ಆಕಾಶ–ಸಮುದ್ರ ಭೂಮಿ ಚಲನೆ ಮರುತ ನೋಳ್‌ನಂಟು ವಾಯು ಇಲ್ಲದೇ ಪ್ರಾಣ ಬದುಕಿರಲು ಸಾಧ್ಯವೇ? ಹೀಗೆ ಇಡಿಯ ವಿಶ್ವವು ವಿಧ ವಿಧವಾದ ಸಂಬಂಧಗಳಿಂದ ಒಂದು ಗಂಟು ಅಥವಾ ಕೋಶವೇ ಆಗಿದೆ.

ಈ ಸಂಬಂಧದ ಗಂಟು ಕೆಲವು ಚಿಕ್ಕದಾಗಿರಬಹುದು. ಅಥವಾ ದೊಡ್ಡ ದಾಗಿರಬಹುದು. ಚಿಕ್ಕ ಚಿಕ್ಕ ಗಂಟುಗಳೆಲ್ಲಾ ಪುರುಷ ಪ್ರಯತ್ನದಿಂದ ನಡೆಯುತ್ತದೆ ಎನ್ನುತ್ತಾರೆ ಡಿ.ವಿ.ಜಿ. ಅವರು. ಮದುವೆಗಳಾದರೆ ದು ಬ್ರಹ್ಮ ಗಂಟು. "ಯಾರೋ ಎಲ್ಲೋ ಇದ್ದವರಿಬ್ಬರ ತಂದರು ಸತಿಪತಿ ಗೈದಿಹರು, ಹೋಮನ ಹುಯ್ಯಿಸಿ ಹರಕೆಯ ಸಿಕ್ಕಿಸಿ ದಂಪತಿಗಳ ನೀಲೆನ್ನುವಿರಿ... ಎನ್ನುತ್ತದೆ ಕವಿವಾಣಿ. ಇದು ಭಗವಂತನ ಹಿರಿಯ ಸಂಬಂಧದ ಗಂಟು.

ಜೀವ ಜೀವದ ನಂಟು ಹೀಗಾದರೆ ಜಡ ಚೇತನದ ನಂಟು ಹೇಗೆ? ಜಡವಾದ ಕಲ್ಲಿನಲ್ಲಿ ಒಬ್ಬ ಶಿಲ್ಪಿ ಸೊಗಸಾಗಿ ಒಂದು ಭಗವಂತನ ಮೂರ್ತಿಯನ್ನು ಕಡೆದಿದ್ದಾನೆ... ಅದನ್ನು ಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಿ ಜನರು ಆ ಮೂರ್ತಿಯನ್ನು ಪೂಜಿಸುವಂತೆ ಮಾಡುತ್ತಾನೆ. ಹೀಗಿದೆ ಜಡ ಚೇತನದ ನಂಟು ಎಂದು ತಿಳಿಯಬಹುದಲ್ಲವೇ? ಹಾಗೆಯೇ ಜಡ ಪರ್ವತವನ್ನು ಮೋಡ ತಗುಲಿ ಮಳೆ ತರಿಸಿ ಜನರಿಗೆ ಆನಂದ ಕೊಡುವುದಿಲ್ಲವೇ? ಇದನ್ನೆಲ್ಲಾ ಅರಿತ ಮೇಲೆ ಯಾವುದಕ್ಕೆ ತಾನೇ ಸಂಬಂಧವಿಲ್ಲಾ? ಅಂಟಿಲ್ಲಾ? ನೆಂಟಿಲ್ಲಾ? ಬಾಂಧವ್ಯವಿಲ್ಲಾ? ಪ್ರಪಂಚದ ಎಲ್ಲಾ ವಸ್ತುಗಳೂ ಒಂದಕ್ಕೊಂದು ಅಂಟಾಗಿ ಅದರಿಂದ ನೆಂಟತನವನ್ನು ಬೆಳೆಸಿ. ಅದೇ ದೊಡ್ಡ ಸಂಬಂಧಗಳಾಗಿವೆ. ಈ ಬಿಗಿ ಯಾದ ಬಾಂಧವ್ಯದ ಜಡೆಯನ್ನು ಯಾರಾದರೂ ಬಿಡಿಸಲು ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ ಡಿ.ವಿ.ಜಿ. ಉದಾ: ತಾಯಿ ಮಕ್ಕಳ ಸಂಬಂಧ.

ಮುಂದೆ ಒಂದು ಅರ್ಥವತ್ತಾದ ಮನೋಜ್ಞವಾದ ತಿಳಿವಳಿಕೆಯನ್ನೂ ನೀಡುತ್ತಾರೆ. ಇಷ್ಟೆಲ್ಲಾ ಬಂಧನಗಳಿದ್ದು ಹೊರ ಜಗತ್ತಿನ ಎಲ್ಲಾ ಜವಾಬ್ದಾರಿ ಗಳನ್ನೂ ಹೊತ್ತು ನಿಷ್ಠೆಯಿಂದ ಒಬ್ಬ ಸೇವಕನಂತೆ ಕೆಲಸ ಮಾಡು... ಆಂತರ್ಯದಲ್ಲಿ ಅಂದರೆ ಒಳಜಗಕೆ 'ಪದ್ಮ ಪತ್ರ ಮಿವಾಂ ಭಸಾ' ಎನ್ನುವಂತೆ ನಿರ್ಲಿಪ್ತನಂತೆ ಜೀವನವನ್ನು ನಡೆಸಿ "ಒಂಟಿಯಾಗಿ ಸಿಕೋ ಜೀವನವ" ಎಂದು ಈ ಮೌಕ್ತಿಕದಲ್ಲಿ ಜನರಿಗೆ ಹಿತನುಡಿಯನ್ನು ಅರಿವಿಗೆ ತಿಳಿಸುತ್ತಾರೆ.

**ಜಿ.ಪಿ. ಲಕ್ಷ್ಮೀದೇವಿ**
**23444798**

# ನಮ್ಮ ಪತ್ರಿಕೆ

ಬಂಧು ಬಾಂಧವರೇ ಬನ್ನಿರಿ – ಬನ್ನಿರಿ,
ಶುಭಾಶಯಗಳನು ಜೊತೆಯಲಿ ತನ್ನಿರಿ–ತನ್ನಿರಿ,
ಸಂಭ್ರಮ ಪಡುವಾ ಕ್ಷಣಗಳು ಬಂದಿವೆ,
ಹೆಮ್ಮೆಯ ಜೊತೆಗೆ ಹರುಷವ ತಂದಿವೆ ॥1॥

ನಮ್ಮಯ ಪತ್ರಿಕೆ 'ಬೃಹಚ್ಚರಣ'ವು
ಗಳಿಸಿದೆ ಜನಗಳ ಆದರ–ಒಲವು,
ಕಠಿಣ ಹಾದಿಯಲಿ ತಾ ಮುನ್ನಡೆದು
ಪೂರೈಸಿದೆ ಇದು, ವರುಷಗಳೈದು ॥2॥

ಹೊಂದಿದೆ ಸುಂದರ ವಿನ್ಯಾಸವನು
ತರುವುದು ವಿಷಯದಿ ವೈವಿಧ್ಯತೆಯನು
ಇದರ ಬರುವನು ನೋಡುತ ಎದುರು
ಕಾತುರದಿಂದಲಿ ಕಾಯ್ವರು ನಮ್ಮಯ ಜನರು ॥3॥

ಶುಕ್ಲಪಕ್ಷದ ಚಂದ್ರನ ರೀತಿ
ಬೆಳೆಯಲಿ ಗಳಿಸುತ ಜನಗಳ ಪ್ರೀತಿ
ವಿಜಯದ ಯಾತ್ರೆಯು ನಿಲ್ಲದೆ ಸಾಗಲಿ
ಸಾಗುತ ಎಲ್ಲರ ಮನೆ ಮಾತಾಗಲಿ ॥4॥

ಕಿತ್ತಗಾನಹಳ್ಳಿಯ ನಾಗದೇವರು
ಬೇಡಿದ ಎಲ್ಲಾ ವರಗಳ ಕೊಡುವರು
ನಮ್ಮ ಪತ್ರಿಕೆಯನು ಸದಾ ಹರಸಲಿ
ನೂರ್ಕಾಲ ನಡೆವಂತೆ ಆಶೀರ್ವದಿಸಲಿ ॥5॥



**ಬಿ.ಈ. ಗೋವಿಂದ್**
9167762988

## ಡಿ.ವಿ.ಜಿ. – ಪತ್ರಿಕೋದ್ಯಮ

1906ರಲ್ಲಿ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದ ನವರತ್ನ ರಾಮರಾಯರ ಮನೆತನದ ಅಳಿಯಂದಿರಲ್ಲಿ ಒಬ್ಬರಿಗೆ ವಾರಪತ್ರಿಕೆ ಹೊರಡಿಸುವ ಇಚ್ಛೆ ಇತ್ತು. ರೈಲ್ವೆ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದವರು ಬೇಸತ್ತು ರೈಲ್ವೆ ಇಲಾಖೆಯ ಅನ್ಯಾಯ, ಅನೀತಿಗಳನ್ನು ಪ್ರಚುರಗೊಳಿಸುವುದಕ್ಕಾಗಿಯೇ 'ರೈಲ್ವೆ ವಿಷಲ್' ಎಂಬ ಪತ್ರಿಕೆಯನ್ನು ಹೊರಡಿಸಲು ನಿಶ್ಚಯಿಸಿ ಮುದ್ರಣಕ್ಕೆ ಬೇಕಾದ ಸಾಮಗ್ರಿಗಳನ್ನು ತರೆಸಿದ್ದರು. ದುರಾದೃಷ್ಟವಶಾತ್ ಕಣ್ಮುಚ್ಚಿದರು. ಅದೇ ಮನೆತನದ ಅನಂತರಾಯರು ವಸ್ತುಗಳಿಂದ ತಾವೇ ಮುದ್ರಣಾಲಯ ಪ್ರಾರಂಭಿಸಿದರು. ನರಸಿಂಗರಾಯರ 'ಸೂರ್ಯೋದಯ' ಪ್ರಕಾಶಿಕೆ, ಕನ್ನಡ ವಾರಪತ್ರಿಕೆ ಇಲ್ಲಿಂದಲೇ ಅಚ್ಚಾಗುತ್ತಿತ್ತು. ಈ ಪತ್ರಿಕೆಗೆ ಗುಂಡಪ್ಪ ನವರು ಬರೆದು ಕೊಡುತ್ತಿದ್ದ ಪದ್ಯಗಳನ್ನು ಅನಂತರಾಯರು ಮೆಚ್ಚಿ ಕೊಂಡು ನಾಲ್ಕು ಮುಖ್ಯ ಲೇಖನಗಳನ್ನು ಬರೆಯುವ ಜವಾಬ್ದಾರಿ ಕೊಟ್ಟು ಗುಂಡಪ್ಪನವರನ್ನು ಕೆಲಸಕ್ಕೆ ಸೇರಿಸಿಕೊಂಡರು. 'ಸೂರ್ಯೋದಯ' ಜೊತೆಗೆ ಕಂಟೋನ್ಮೆಂಟ್‌ನ ಆಂಗ್ಲೋ ಇಂಡಿಯನ್ ಹೊರಡಿಸುತ್ತಿದ್ದ 'ಈವಿನಿಂಗ್‌ಮೈಲ್' ಪತ್ರಿಕೆಗೆ ಕಿರುಲೇಖನಗಳನ್ನು ಬರೆಯುತ್ತಿದ್ದರು. ಪತ್ರಿಕೋದ್ಯಮದಲ್ಲಿ ರುಚಿ ಕಂಡ ಗುಂಡಪ್ಪನವರು 'ಭಾರತೀ' ಎಂಬ ಪತ್ರಿಕೆ ಪ್ರಾರಂಭಿಸಿದರು. 'ಸ್ಟಾಂಡರ್ಡ್' ಪತ್ರಿಕೆಯ ಸಂಪಾದಕ ಶ್ರೀನಿವಾಸ ಅಯ್ಯಂಗಾರ್ ನೇತೃತ್ವದಲ್ಲಿ ಸರ್ಕಾರದ ಕಾನೂನನ್ನು ಪ್ರತಿಭಟಿಸಿ ಎಲ್ಲಾ ಪತ್ರಿಕೆಯವರು ಪ್ರಕಟಣೆಯನ್ನು ನಿಲ್ಲಿಸುವ ಪ್ರತಿಭಟನೆಯನ್ನು ಕೈಗೊಂಡರು. ಗುಂಡಪ್ಪನವರ ಪತ್ರಿಕೆಯು ಸ್ಥಗಿತವಾಯಿತು. ಶ್ರೀನಿವಾಸ ಅಯ್ಯಂಗಾರ್ ತಮ್ಮೊಂದಿಗೆ ಮದ್ರಾಸಿಗೆ ಕರೆದೊಯ್ದು ಮೈಸೂರು ಸಂಸ್ಥಾನದ ಪತ್ರಿಕಾ ಸ್ವಾತಂತ್ರ್ಯ ಹರಣದ ಬಗ್ಗೆ ಮದ್ರಾಸಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಪ್ರಕಟಣೆಗಳನ್ನು ಸಂಗ್ರಹಿಸಿ ಪುಸ್ತಕವನ್ನು ತರುವುದು ಉದ್ದೇಶವಾಗಿತ್ತು. ಈ ಸಮಯದಲ್ಲಿ ಗುಂಡಪ್ಪನವರು ಹಿಂದೂ, ಇಂಡಿಯನ್ ಪೇಟ್ರಿಯೇಟ್ ಪತ್ರಿಕೆಗಳಿಗೆ ಲೇಖನಗಳನ್ನೂ, ವೀರಕೇಸರಿ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿದರು. ಸಂಘವೊಂದರಲ್ಲಿ ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ಸರ್ಕಾರವು ಇವರನ್ನು ಶತೃಗಳೆಂದು ಪರಿಗಣಿಸಿ ಜೈಲಿಗಟ್ಟುವ ತರಾತುರಿಯಲ್ಲಿದ್ದರಿಂದ ಗುಂಡಪ್ಪನವರು ಹಿತೈಷಿಗಳ ಒತ್ತಾಯದಿಂದ ಬೆಂಗಳೂರಿಗೆ ಹಿಂತಿರುಗಿ 'ಮೈಸೂರು ಟೈಂಸ್' ಪತ್ರಿಕೆಗೆ ಸಹಾಯಕ ಸಂಪಾದಕರಾಗಿ, ವಕೀಲ ಶ್ರೀರಾಮಸ್ವಾಮಿ ಅಯ್ಯಂಗಾರರಲ್ಲಿ ಕೆಲಸ ನಿರ್ವಹಿಸಿದರು. 1912ರಲ್ಲಿ ವಿಶ್ವೇಶ್ವರಯ್ಯನವರು ದಿವಾನರಾದ ನಂತರ ಮೈಸೂರು ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಮರಳಿತು. ಅದೇ ವರ್ಷ ಮದ್ರಾಸಿನ 'ಇಂಡಿಯನ್ ರಿವ್ಯೂ' ಪತ್ರಿಕೆಯಲ್ಲಿ ದಿವಾನ್ ರಂಗಾಚಾರ್ಲುರವರ ಬಗ್ಗೆ ಲೇಖನಗಳನ್ನು ಮೆಚ್ಚಿ ಕೊಂಡವರಲ್ಲಿ ವಿಶ್ವೇಶ್ವರಯ್ಯನವರು ಮೊದಲಿಗರು. 'ಕರ್ನಾಟಕ ಪತ್ರಿಕೆ' ಹೊರತರಲು ಸಂಪಾದಕತ್ವದಲ್ಲಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಟರ ಶಿಫಾರಸ್ಸು ಬೇಕಾಗಿತ್ತು. ಕೋಲಾರದವರೇ ಜಿಲ್ಲಾ ವರಿಷ್ಠಾಧಿಕಾರಿಯಾಗಿದ್ದುದರಿಂದ ತಡವಿಲ್ಲದೆ ಅನುಮತಿ ದೊರೆತು, 1913ರಿಂದ 3 ವರ್ಷಗಳು ಸತತವಾಗಿ ಪತ್ರಿಕೆ ಹೊರಬಂದಿದ್ದು. ಸರ್ಕಾರದ ವೈಫಲ್ಯಗಳನ್ನು ಟೀಕಿಸುತ್ತಿದ್ದ ಡಿ.ವಿ.ಜಿ.ಯವರಿಗೆ ವಿಶ್ವೇಶ್ವರಯ್ಯನವರು ಕರೆದು 'ನಿನ್ನ ಮೇಲೆ ಕ್ರಮಕೈಗೊಳ್ಳಲು ನನಗೆ ಒತ್ತಡವಿದೆ' ಎಂದು ಅರುಹಿದಕ್ಕೆ ಪತ್ರಿಕೆ ನಿಲ್ಲಿಸಿದರು. ಚಂದಾದಾರರಿಂದ ಎಂಟು ಸಾವಿರ ರೂ. ಬಾಕಿಯೂ ತಟಸ್ಥವಾಯಿತು.

1923ರಲ್ಲಿ ರಾಜ್ಯ ಸರ್ಕಾರವು ತಾವು ನಡೆಸುತ್ತಿದ್ದ. 'ಅರ್ಥಸಾಧಕ' ಎಂಬ ಪತ್ರಿಕೆಯನ್ನು ಗುಂಡಪ್ಪನವರಿಗೆ ವಹಿಸಿತು. ಬಿ.ಎಂ.ಶ್ರೀ.ಯವರ ಇಂಗ್ಲಿಷ್ ಗೀತೆಗಳು ಅನುವಾದವಾಗಿ ಬೆಳಕು ಕಂಡಿದ್ದು ಇಲ್ಲಿಯೇ ಸರ್ಕಾರದ ಕಿರಿಕಿರಿಯಿಂದ ಈ ಪತ್ರಿಕೆ ನಿರ್ವಹಣೆಯಿಂದ ಹಿಂದೆ ಸರಿದರು.

ಪಂಜಾಬಿನ 'ಹೆರಾಲ್ಡ್ ಟ್ರಿಬ್ಯೂನ್' ಎಂಬ ಪತ್ರಿಕೆಗೆ ಸಂಪಾದಕರಾಗಲು ವಿಶ್ವೇಶ್ವರಯ್ಯನವರು ಗುಂಡಪ್ಪನವರ ಹೆಸರನ್ನು ಸೂಚಿಸಿದರು. ಸ್ವಚ್ಛಂದವಾಗಿ ಬೆಳೆದ ತಮಗೆ ಒಗ್ಗದ ವಿಷಯವೆಂದು ಬಿಟ್ಟು ಬಿಟ್ಟರು.

ಮೈಸೂರು ದಸರಾ ಕಾರ್ಯಕ್ರಮಕ್ಕೆ ಪತ್ರಿಕಾ ಪ್ರತಿನಿಧಿಯಾಗಿ ಆಯೋಜಿಸಲ್ಪಟ್ಟು, ಹಿಂತಿರುಗುವ ಸಮಯದಲ್ಲಿ ನೀಡಿದ್ದ ಹಣವಿದ್ದ ಲಕೋಟೆಯನ್ನು ಹಿಂತಿರುಗಿಸಿ ದಿವಾನರಲ್ಲಿ 'ಪ್ರತಿನಿಧಿಯ ಖರ್ಚು ಆಯಾ ಪತ್ರಿಕೆ ನೋಡಿಕೊಳ್ಳಬೇಕೇ ವಿನಃ ಸರ್ಕಾರವಲ್ಲ. ನಿಮ್ಮ ಹಂಗಿಗೆ ಸಿಲುಕಲು ನನಗಿಷ್ಟವಿಲ್ಲ' ಎಂದರು. ಅಂತೆಯೇ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ನೀಡಿದ ಸಂಭಾವನೆಯನ್ನು ನಯವಾಗಿ ನಿರಾಕರಿಸಿದ ಧೀಮಂತ ವ್ಯಕ್ತಿ. ಸರ್ಕಾರದಿಂದ ಬಂದ ಹಲವಾರು ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿರುವುದಿಲ್ಲವೆಂದು ಶ್ರೀಯುತರ ಕುಟುಂಬ ಸದಸ್ಯರಾದ ಶ್ರೀ ಚಂದ್ರಮೌಳಿಯವರು ಈಗಲೂ ನೆನೆಯುತ್ತಾರೆ. ಎಂದೂ ಯಾರ ಹಂಗಿಗೂ ತಲೆಬಾಗದ ಜ್ಞಾನಿ. ಪತ್ರಿಕೋದ್ಯಮದ ಪಿತಾಮಹ ಡಿವಿಜಿಯವರಿಗೆ ಓದುಗರೆಲ್ಲರ ಪರವಾಗಿ ಭಾವಪೂರ್ಣ ವಂದನೆಗಳು.

**–ಸರ್ಜಾಪುರ ಸಿ. ಶ್ರೀನಿವಾಸ್**

## ಡಿ.ವಿ.ಜಿ. ಒಂದು ನೆನಪು

ಮನಸ್ಸಿನ ಪ್ರಸಾದ ಬುದ್ಧಿಯ ಪ್ರಕಾಶದಿಂದ ಅಂತರಂಗದಿ ಚಂದ್ರ ಕಾಂತಿ ಉಂಟಾಗುತ್ತದೆ. ತತ್ವನಿರೂಪಣೆ ಕಷ್ಟ, ನೀತಿಬೋಧೆ ಸುಲಭ, ವಿಷಯ ಬೋಧನೆ ಅಧಿಕಾರಕ್ಕೆ ತಕ್ಕಂತೆ, ಗೋವಿನಕಥೆ, ಚಿಕ್ಕ ಮಕ್ಕಳಿಗೆ ರಘುವಂಶ, ವಯಸ್ಸಿನವರಿಗೆ ವಿಷಯಕ್ಕೆ ತಕ್ಕ ಯೋಗ್ಯತೆ, ಇರಬೇಕು.

ಶಿಷ್ಯ ತಾರತಮ್ಯದಂತೆ, ಶಿಕ್ಷಣ ತಾರತಮ್ಯ
ವೈದ್ಯಶಾಸ್ತ್ರ ಆರೋಗ್ಯ ಸ್ಥಿತಿ ಒಂದು
ಚಿಕಿತ್ಸೆ, ಪಥ್ಯ ಹಲವಾರು ಅನಾರೋಗ್ಯಕ್ಕೆ ಕಾರಣ ಬೇರೆ
ದೇಹ ದೌರ್ಬಲ್ಯ ನೋಡಿ–ಔಷಧ
ಜೀವ ದೌರ್ಬಲ್ಯ ನೋಡಿ ಉಪದೇಶ
ಅರಸಿಗೆ ತಕ್ಕ ಅರಮನೆ, ದಾಸಿಗೆ ತಕ್ಕದ್ದು ಅವಳ ಮನೆ

ಪೂಜ್ಯ ಡಿ.ವಿ.ಜಿ. ಅವರ ಮುತ್ತಿನಂಥ ವಾಕ್ಯಗಳು. ಇದು ಮನನೀಯವೂ. ಸ್ಮರಿಸಿ ಆಚರಿಸುವಂಥ ವಿಷಯ. ಇದಕ್ಕೆ ತಕ್ಕ ಸನ್ನಿವೇಷ ನನ್ನ ಪರಿಚಯದ ಶ್ರೀ ಇ.ಪಿ. ಅಲಮೇಲು ಎಂಬವರಿಗೆ ಆಗಿದ್ದು ಸತ್ಯಘಟನೆ. ಶ್ರೀಮತಿ ಇ.ಸಿ. ಅಲಮೇಲು ಸಂಗೀತ ಹಾಗೂ ವೀಣಾ ವಿದ್ವಾಂಸೆ. ಪುಟ್ಟ ಮಕ್ಕಳಿಗೆ ಹಾಡು ಕಲಿಸಿ ತಯರಿ ಕೊಟ್ಟು ಒಮ್ಮೆ ಪೂಜ್ಯ ಡಿ.ವಿ.ಜಿ. ಅವರ ಬಳಿ ಮಕ್ಕಳನ್ನು ಕರೆದುಕೊಂಡು ಹೋಗಿ ಹಾಡಿಸಿ, ಆಶೀರ್ವಾದ ಪಡೆಯಲು ಹೋದರು. ಮಕ್ಕಳು ಹಿರಿಯರ ದೊಡ್ಡ ಕೀರ್ತನೆಗಳನ್ನು ಸುಶ್ರವ್ಯವಾಗಿ ಹಾಡಿದರು. ಡಿ.ವಿ.ಜಿ. ಅವರು ಹಾಡುಗಳನ್ನು ಕೇಳಿ, ಸಂತಸಪಟ್ಟು, ಮಕ್ಕಳಿಗೆ ಸಿಹಿಕೊಟ್ಟು ಆಶೀರ್ವದಿಸಿದರು. ಶಿಕ್ಷಕಿಯಾದ ಸಂಗೀತ ಗುರುಗಳಿಗೆ ತಿಳಿಸಿದರು. ನೀವು ಚೆನ್ನಾಗಿ ಹಾಡು ಕಲಿಸಿ ಮಕ್ಕಳ ಬಗ್ಗೆ ಹೆಚ್ಚು ಶ್ರಮವಹಿಸಿರುವುದು ಸಂತೋಷ. ಆದರೆ "ಆ ಚಿಕ್ಕಮಕ್ಕಳಿಗೆ ಇಷ್ಟು ದೊಡ್ಡ ಪಾಠದ ಬದಲು ಕನ್ನಡದಾಸರ ಪದಗಳು. ಶ್ರೀಕೃಷ್ಣನ ಬಾಲಲೀಲೆಗಳ ಅನೇಕ ಹಾಡುಗಳಿವೆ ಅದನ್ನು ಕಲಿಸಿ ಮಕ್ಕಳೂ ಹೇಳಿ ಆನಂದ ಪಡುತ್ತದೆ. ಅವರಿಗೇಕೆ ಇಷ್ಟು ದೊಡ್ಡ ಪಾಠ. ಕನ್ನಡ ಭಾಷೆ ಸುಲಭ. ಶ್ರೀಕೃಷ್ಣ ಸ್ತುತಿಯಲ್ಲಿ ಬಾಲಲೀಲೆ, ಸಂಸ್ಕಾರ–ಆನಂದ ಕೊಡುತ್ತದೆ. ಮುಖ್ಯ ಅರ್ಥವಾಗುತ್ತದೆ ಎಂದರು.

ಪಾಠ ಹೇಳುವವರೂ ಪೂಜ್ಯರಿಂದ ಪಾಠ ಕಲಿಯಬೇಕಾದ ಪ್ರಸಂಗ

**ಭ್ರಮರ ಗೋಪಿನಾಥ್**
**26677574**

## ಅನ್ನ ಸಂತರ್ಪಣಾ ನಿಧಿಗೆ ದೇಣಿಗೆ ನೀಡಿದವರು

**ಶ್ರೀಯುತರಾದ**

| | |
|---|---|
| ಲಕ್ಷ್ಮೀನಾರಾಯಣನ್ ಕೆ.ಆರ್. | 5000/– |
| ಗಿರಿಜಾ ದೇವಿ ಎಂ. | 5000/– |
| ಬಿ.ಎನ್.ಜಿ. ಪ್ರಸಾದ್ | 4,000/– |
| ಸುನಂದಮ್ಮ | 4,000/– |
| ಎನ್. ರಾಮು | 4,000/– |
| ಸೋಮು, ಅರುಣ್, ಸತೀಶ್, ಶ್ರೀಧರ, ಶ್ರೀನಿವಾಸ ಶರ್ಮಾ | 3,500/– |
| ಪ್ರಭಾಕರ್ ನಟರಾಜನ್ | 2,000/– |
| ರಂಗನಾಥ್ ಎಂ.ಪಿ. | 2,000/– |
| ಜಿ.ಪಿ. ಲಕ್ಷ್ಮೀದೇವಿ ಮತ್ತು ಮಕ್ಕಳು | 2,000/– |
| ಸುಬ್ಬಲಕ್ಷ್ಮಿ | 2,000/– |
| ನಾರಾಯಣ ರಾವ್ ಕೆ.ಆರ್. | 1,501/– |
| ಶಿವಸ್ವಾಮಿ | 1,500/– |
| ಎಂ.ಆರ್. ಜಯರಾಮ್ | 1,500/– |
| ರಾಘವನ್ | 1,500/– |
| ರವಿ ರಾಧಾಕೃಷ್ಣ | 1,500/– |
| ರಘುನಾಥ್ ಈಶ್ವರನ್ | 1,500/– |
| ಬಿ.ಎಸ್. ಸೂರ್ಯನಾರಾಯಣ್ | 1,500/– |
| ಡಿ. ಧನಪ್ಪ ಮತ್ತು ಅಮ್ಮಯ್ಯ ಕುಟುಂಬ | 1,500/– |
| ಅರವಿಂದ್ | 1,005/– |
| ಶರ್ಮದಾ, ಸಂತೋಷ್ ಸ್ವಾಮಿನಾಥ್ | 1,000/– |
| ಗುರುಮೂರ್ತಿ, ಇಳಾ | 1,000/– |
| ಟಿ.ಎಸ್. ಕೃಷ್ಣನ್ ಮತ್ತು ಕುಟುಂಬ | 1,000/– |
| ಪ್ರಭಾ | 1,000/– |
| ಸುಮಾ ಪ್ರಹ್ಲಾದ್ | 1,000/– |
| ತಾರಾ ರವೀಂದ್ರ | 1,000/– |
| ಲತಾ ಮುರಳೀಧರ್ | 1,000/– |
| ರವಿಕುಮಾರ್ ಎಸ್. | 1,000/– |
| ಆರ್.ಎನ್. ಸ್ವಾಮಿನಾಥನ್ | 1,000/– |
| ಶೇಷಾದ್ರಿ ಬಿ.ಒ.ಬಿ. | 1,000/– |
| ರವಿಶಂಕರ್ ಎಂ.ಆರ್. | 1,000/– |
| ಮೀನಾ ಎಸ್. ಮಣಿ | 1,000/– |
| ಪಾರ್ವತಿ ವಿಜಯಸಾರಥಿ | 1,000/– |
| ಕೌಶಿಕ್ | 1,000/– |
| ಗೌರಮ್ಮ ಜಿ.ಎಸ್. | 1,000/– |
| ಶಾರದಮ್ಮ ಬಿ.ಎನ್. | 1,000/– |
| ಎಸ್.ಎನ್. ಜಯರಾಮ್ ಕುಟುಂಬ | 1,000/– |
| ವೇಣುಗೋಪಾಲ್ ಕೆ. | 1,000/– |

**ವಿದ್ಯಾನಿಧಿಗೆ**

| | |
|---|---|
| ಸೀತಾರಾಮ್ ಕೆ.ಜಿ | 5,001/– |
| ಗಿರಿಜಾದೇವಿ | 5,000/– |
| ಬಿ.ಎಸ್. ಸೂರ್ಯನಾರಾಯಣ್ | 1,500/– |
| ಲಕ್ಷ್ಮೀನಾರಾಯಣ್ ಕೆ.ಆರ್. | 1,000/– |
| ಗುರುಪ್ರಸಾದ್ | 200/– |

## ಅನ್ನಸಂತರ್ಪಣಾ ನಿಧಿಗೆ ದೇಣಿಗೆ ನೀಡಿದವರು

ಮಂಜುನಾಥ್ ಎ.ವಿ.
ಸುಮಿತ್ರಮ್ಮ ಆರ್.ಕೆ. ಮತ್ತು ಕುಟುಂಬ
ಕೆ.ಆರ್. ಇಣಿ
ಸುಬ್ಬರಾವ್
ಗುರು ಪ್ರಸಾದ್
ಆರ್.ಎನ್. ಕುಮಾರ್ ಮತ್ತು ಆಶಾ ಕುಮಾರ್
ಪ್ರಭಾ ನಾಗರಾಜ್
ಸಾವಿತ್ರಮ್ಮ ಆರ್.
ನಟರಾಜನ್ ಕೆ.ಸಿ.
ಸರಸ್ವತಿ ನಟರಾಜನ್
ಶುಭಾ ಗಾಯತ್ರಿ
ಗೋವಿಂದ ರಾವ್ ದೇಶಪಾಂಡೆ
ಶಿವಕುಮಾರ್ ಎನ್.
ಮಮತಾ ಶಿವಕುಮಾರ್
ವಿಮಲಾ
ನಿರ್ಮಲಾ ಸುಧೀಂದ್ರ
ಶ್ರೀಕಾಂತ್ ಆರ್.ಎ.
ಗಾಯತ್ರಿ ಶೇಷಾಚಲಮ್
ರಘುರಾಮ್ ಟಿ.ಜೆ.
ಶೇಷಾದ್ರಿ
ವೆಂಕಟಸುಬ್ರಮಣ್ಯಮ್
ಚಂದ್ರಮೌಳೇಶ್ವರ
ಆರ್.ಪಿ. ಉಮೇಶ್
ಪ್ರಸಾದ್ ಎ.ಆರ್.
ಕೃಷ್ಣಮೂರ್ತಿ ಬಿ.ಎಸ್.
ಜಿ. ಅಶೋಕ್‌ಕುಮಾರ್
ಸ್ವಾಮಿನಾಥನ್ ಜಿ.
ಹಂಸ
ಸತ್ಯನಾರಾಯಣ
ಶ್ರೀನಿವಾಸನ್ ವಿ.
ಅನಂತರಾಮ್ ಆರ್.ಎಸ್.
ವೆಂಕಟಸುಬ್ಬು ಕೆ.
ಸರಸ್ವತಿ ಕೆ.
ಇಂದಿರಾ
ಅನಂತ್ ಹೆಚ್.ಜಿ.
ವೆಂಕಟೇಶ್ ಜಿ.ಎಸ್.
ವೇಣುಗೋಪಾಲ್ ಜಿ.ಎಸ್.
ಶ್ರೀನಾಥ್
ಶಾಂತಾ ಲಕ್ಷ್ಮೀನಾರಾಯಣ್
ಚಂದ್ರಶೇಖರ್ ಎಸ್.
ಪದ್ಮನಾಭ ಬಿ.ಎಸ್.ಕುಟುಂಬ

ರವಿ
ಶ್ರೀಕಂಠೇಶ್ವರ ಅಯ್ಯರ್ ಎಸ್.
ಆರ್.ವಿ. ಎಸ್. ಮಣಿಯನ್ ಮತ್ತು ಕುಟುಂಬ
ಟಿ.ವಿ.ಎಸ್. ಶರ್ಮಾ
ಶಾಂತಾ ವೆಂಕಟೇಶ್
ಎಸ್.ಸಿ. ರಾಘವಪ್ರಸಾದ್
ರಾಮನ್ ರಮೇಶ್
ಶ್ರೇಯಾ
ಶಿವ ರಾಮಚಂದ್ರ
ರಾಮಕೃಷ್ಣ
ಎ.ವಿ. ರಾಮಸ್ವಾಮಿ
ಸದಸ್ಯ ಮಂಜು
ತ್ಯಾಗರಾಜನ್ ಎಸ್.
ಚಂದ್ರಶೇಖರ್ ಕೆ.
ಅರ್ಜುನ ದೇಶಪಾಂಡೆ
ಸುಹಾಸಿನಿ
ಜಯರಾಮ್ ಕೆ.ಸಿ.
ಗಂಗಾ ಕಿರಣ್
ಸುಬ್ಬಣ್ಣ ಜಿ.ವಿ.
ಗಾಯತ್ರಿ ವಾಸುದೇವನ್
ಎ.ಜಿ. ಗುರು ರಾವ್
ರವಿಶಂಕರ್ ಆರ್.
ಕೇಶವ ಕುಮಾರ್
ಶೈಲಾ ಎಸ್.
ರಾಜರಾಜೇಶ್ವರಿ
ದೀಪಿಕಾ ರಾಜೇಶ್
ಚಂದ್ರಿಕಾ
ಎನ್.ಎಸ್. ವಾಸು
ಶಾಂತಾ
ಸರೋಜಮ್ಮ ಜಿ.
ನಾಗರಾಜ್ ಜಿ.ಎಸ್.
ಗುರುಪ್ರಸಾದ್
ಸತೀಶ್ ವಿ.
ವನಜಾಕ್ಷಿ, ಬೆಂಗಳೂರು
ಪಾರ್ವತಿ ರಾಧಾಕೃಷ್ಣ
ವೆಂಕಟೇಶ್ ಜಿ.ಎಸ್.
ಸುಂದರಮ್ಮ

**ವಾರ್ಷಿಕ ನಿರ್ವಹಣಾ ವೆಚ್ಚ 500 ರೂ. ನೀಡಿರುವ ಸದಸ್ಯರು**

ರಮೇಶ್ ಆರ್.ಎಸ್.
ಶಂಕರ್ ಸಿ.ಕೆ.
ವೆಂಕಟೇಶ್ ಎಲ್.

ವೆಂಕಟೇಶ್ ಪ್ರಸಾದ್ ಆರ್.
ಉಮೇಶ್
ಗೋಪಾಲಕೃಷ್ಣ ಆರ್.
ಪರಿಮಳಾ ಎಸ್.ಸಿ.
ಶ್ರೀನಿವಾಸಯ್ಯ ಎಸ್.
ಟಿ.ಪಿ. ಸೂರ್ಯನಾರಾಯಣ
ಮೇಘನಾ ರವಿಕುಮಾರ್
ಶ್ರೀನಿವಾಸನ್ ಅರೆಕರ್
ಶಿವಪ್ರಕಾಶ್ ಎಸ್.
ಚಂದ್ರಮೌಳಿ ಆರ್.
ಕೀರ್ತಿ ಕಶ್ಯಪ್
ಆರ್.ಎನ್. ಸ್ವಾಮಿನಾಥನ್
ನಾರಾಯಣ್ ರಾವ್ ಕೆ.ಆರ್.
ಕೃಷ್ಣಸ್ವಾಮಿ ಸಿ.
ಆರ್.ಎಸ್. ವೆಂಕಟೇಶ್
ಟಿ.ಪಿ. ಜಗನ್ನಾಥ
ವಿಜಯ ಪದ್ಮ ಜಗನ್ನಾಥ
ಸುನಂದಮ್ಮ
ರಾಮು ಎನ್.
ಉಮಾ ಜಯರಾಮನ್
ವಿದ್ಯಾಮೂರ್ತಿ
ಜಿ.ಎಸ್. ರವಿಶಂಕರ್
ಆರ್.ಪಿ. ರವಿಶಂಕರ್
ಎ.ಜಿ. ಗುರು ರಾವ್
ಜಯರಾಮನ್ ಎಂ.ಆರ್.
ನಾಗಲಕ್ಷ್ಮಮ್ಮ ಆರ್.ಕೆ.
ಪ್ರಸಾದ್ ಎ.ಆರ್.
ಮಹೇಶ್ ಆರ್.ಎಸ್.
ವೆಂಕಟೇಶ್ ಎಸ್.
ದಿಲೀಪ್ ಕುಮಾರ್ ಆರ್.
ಸೂರ್ಯ ಪ್ರಕಾಶ್ ಬಿ.ಎ.
ಸತೀಶ್ ಬಿ.ಎಸ್.
ಶೇಕರ್ ಕೆ.ಸಿ.
ವೆಂಕಟೇಶ್ ಹೆಚ್.
ಉಮಾ ಗೋವಿಂದ್
ರಾಮಚಂದ್ರ ಎಸ್.
ನರೇಂದ್ರ ಆರ್.
ಅನಂತ್ ಹೆಚ್.ಜಿ.
ಅಂಜನ್ ಕುಮಾರ್
ಪದ್ಮನಾಭನ್ ಸರ್ಜಾಪುರ
ಎನ್. ವೆಂಕಟೇಶ್ ಬಾಬು
ಎಸ್.ಆರ್.ನಾಗಮಣಿ
ಹನುಮಂತನ್ ಕೆ.
ವಿಶ್ವನಾಥ್ ಎಸ್.


# ಕಾಚರಕನಹಳ್ಳಿ ಇಂದು – ದೇವಾಲಯಗಳ ಸಂಕೀರ್ಣ – ಪ್ರೇಕ್ಷಣೀಯ ಧಾರ್ಮಿಕ ಸ್ಥಳ

ಮಂಜುನಾಥ್ ಕೆ. ಕೌಂಡಿಣ್ಯ, ವೆಂಕಟರಾಮ್

















## ಜಯಗುರು ಆದಿಶಂಕರ



ವೈದಿಕ ಧರ್ಮದ ಪುನರುದ್ಧಾರ
ಮಾಡಿದೆ ಶ್ರೀಗುರು ಆದಿಶಂಕರ
ನಿನ್ನಿಂದಲೆ ಕಾಲಟಿ ಆಯ್ತು ಪವಿತ್ರ
ಶಿವಗುರು ಆರ್ಯಾಂಬೆಯ ವರಪುತ್ರ.
ಅಚ್ಚರಿಯೆಂದರೆ ಮೂರೇ ವರ್ಷದಿ
ಪಾರಂಗತನಾದೆ ನಾಲ್ಕೂ ವೇದದಿ
ಮಹಿಳೆಯ ಬಡತನ ಕಾಣುತ ನೊಂದೆ
ಲಕ್ಷ್ಮಿಯ ಬೇಡುತ ಹೊನ್ನಾ ಮಳೆ ತಂದೆ.
ಪೂರ್ಣಾ ನದಿಯ ಪಾತ್ರವ ಬದಲಿಸಿ
ಮಾತೆಯ ಸ್ನಾನಕೆ ನೆರವನು ಒದಗಿಸಿ
ಹಿಡಿಯಲು ಮೊಸಳೆ ಕಾಲನು ತಾನು
ಸನ್ಯಾಸಕೆ ಸಮ್ಮತಿ ಪಡೆದೆಯೆ ನೀನು.
ಗುರುವನು ಅರಸಿ ಹೊರಟಿರೆ ನಿನಗೆ
ಭಗವತ್ಪಾದರು ದೊರಕಿರೆ ಕೊನೆಗೆ
ನರ್ಮದ ಪ್ರವಾಹವ ಬಂಧಿಸಿದೆ
ಗುರುವಿನ ಮೆಚ್ಚುಗೆ ನೀ ಪಡೆದೆ.
ಕಾಶೀನಾಥನ ದರ್ಶನ ಮಾಡಿ
ಚಾಂಡಾಲನಲಿ ಶಿವನನು ನೋಡಿ
ಬ್ರಹ್ಮ ಸೂತ್ರಕೆ ಭಾಷ್ಯವ ರಚಿಸಿದೆ
ಗೀತೆ ಉಪನಿಷತ್ತಿಗೆ ವ್ಯಾಖ್ಯೆಯ ಬರೆದೆ .
ಮಂಡನ ಮಿಶ್ರರ ವಾದದಿ ಜಯಿಸಿ
ಸನ್ಯಾಸತ್ವಕೆ ಅವರನು ಒಲಿಸಿ
ಭಾರತದೆಲ್ಲೆಡೆ ಸಂಚಾರ ಮಾಡಿದೆ
ದೇಶದ ಏಕತೆ ಜಗಕೇ ಸಾರಿದೆ.
ತೀರ್ಥ ಕ್ಷೇತ್ರವ ನೋಡುತ ಬಂದು
ತುಂಗಾ ನದಿಯ ದಡದಲಿ ನಿಂದು
ಶಾಂತತೆಗಲ್ಲಿಯೆ ಮನಸೋತೆ
ನೆಲೆಸಿದಳಲ್ಲಿ ಶಾರದೆ ಮಾತೆ.
ತಾಯ ಅಂತ್ಯಸಂಸ್ಕಾರವ ನಡೆಸಿ
ಕೊಟ್ಟ ಮಾತನು ತಪ್ಪದೆ ಉಳಿಸಿ
ಬದರಿ, ದ್ವಾರಕ,ಪುರಿಯನು ಸೇರಿದೆ
ಎಲ್ಲೆಡೆ ಪೀಠವ ಸ್ಥಾಪನೆ ಗೈದೆ.
ಶಾಕ್ತ ಕಾಪಾಲಿಕ ಮತಗಳ ಖಂಡಿಸಿ
ಅದ್ವೈತ ಸಾರವಾನೆಲ್ಲೆಡೆ ಮಂಡಿಸಿ
ಕಾಶ್ಮೀರದಿ ಶಾರದೆ ಮಂದಿರ ತಲುಪಿದೆ
ಸರ್ವಜ್ಞ ಪೀಠಾರೋಹಣ ಮಾಡಿದೆ.

ಶಿಷ್ಯರ ಜೊತೆ ಕೇದಾರಕೆ ನಡೆದೆ
ಮಹಾಸಮಾಧಿಯ ಲೀನತೆ ಪಡೆದೆ
ಧರ್ಮವನಿಂದಿಗು ಉಳಿಸಿರೆ ನೀವು
ಋಣಿಗಳು ಎಂದಿಗು ನಿಮಗೇ ನಾವು



**ಬಿ.ಈ. ಸೀತಾಲಕ್ಷ್ಮಿ**
9980196470

## ಓದುಗರ ಪತ್ರಗಳು




ಮಾನ್ಯರೆ,

ಬೃಹಚ್ಚರಣ ತ್ರೈಮಾಸಿಕ ಪತ್ರಿಕೆ ಐದು ವರ್ಷಗಳಿಂದ ಪ್ರಕಟವಾಗುತ್ತಿದೆ. ಪತ್ರಿಕೆ ಬಹಳ ಅಚ್ಚುಕಟ್ಟಾಗಿ ಮುದ್ರಿತವಾಗುತ್ತಿದೆ. ಲೇಖನಗಳು ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಅಂದವಾದ ಮುಖಪುಟ, ಜಾಹಿರಾತುಗಳಿಲ್ಲದೆ ಹೊರಬರುತ್ತಿರುವುದು ಸಂತೋಷದಾಯಕ. ಪತ್ರಿಕೆಯನ್ನು ದೊಡ್ಡ ಮಟ್ಟದಲ್ಲಿ ಪ್ರಕಟಿಸುತ್ತಿರುವ ಸಂಪಾದಕ ಮಂಡಲಿ ಹಾಗೂ ಸಂಪಾದಕರಾದ ಶ್ರೀ ಕೆ.ಸಿ.ನಟರಾಜ್‌ರವರಿಗೆ ತುಂಬು ಹೃದಯದ ಅಭಿನಂದನೆಗಳು. ಲೇಖನ ಗಳನ್ನು ಬರೆದು ಕಳುಹಿಸುತ್ತಿರುವ ಲೇಖಕರಿಗೂ ಅನಂತ ಧನ್ಯವಾದಗಳು. ಸಂಘ ಏರ್ಪಡಿಸಿದ್ದ 'ಗುರುವಂದನ' ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಅದಕ್ಕಾಗಿ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದ.

**ಎಸ್. ಶ್ರೀನಿವಾಸಯ್ಯ**
ಕಿತ್ತಿಗಾನಹಳ್ಳಿ

ಮಾನ್ಯರೇ,

ಶ್ರೀಮತಿ ಗಾಯತ್ರಿ ಶೇಷಾಚಲರವರು ದಿನಾಂಕ 27.11.2016ರಂದು ಸಂಘ ಕೈಗೊಂಡ ಮೇಲುಕೋಟೆ ಪ್ರವಾಸವನ್ನು ನೆನೆದು ಪತ್ರ ಬರೆದು ಶ್ಲಾಘಿಸಿದ್ದಾರೆ. ಶ್ರೀಯುತರಿಗೆ ಸಂಘವು ವಂದನೆಗಳನ್ನು ತಿಳಿಸುತ್ತದೆ.

**–ಸಂ**

### ವಾರ್ಷಿಕ ನಿರ್ವಹಣಾ ವೆಚ್ಚ 500 ರೂ. ನೀಡಿರುವ ಸದಸ್ಯರು

| | |
|---|---|
| ಲಕ್ಷ್ಮಣಶರ್ಮಾ ಬೆಟ್ಟಕೋಟೆ | ಚಂಪಕದಾಮ |
| ಅಶ್ವತ್ ರಾಜಾರಾವ್ | ಸುಬ್ಬಲಕ್ಷ್ಮಿ |
| ಡಿ. ಸತ್ಯ ಮೂರ್ತಿ | ಶ್ರೀನಿವಾಸ್ ಡಿ.ವಿ. |
| ಡಿ. ವಿಶ್ವೇಶ್ವರಯ್ಯ | ಮೇಘ ಸುಮಂತ್ |
| ಪ್ರದೀಪ್ ಎಸ್. | ವಿದ್ಯಾಮೂರ್ತಿ |

### ಮನದ ಮಾತು...

ಬೃಹಚ್ಚರಣ ನಮ್ಮೆಲ್ಲರ ಪತ್ರಿಕೆಗೆ ನಿಮ್ಮ ಸಲಹೆ ಸಹಕಾರ ಇದೇ ರೀತಿ ಮುಂದುವರೆಯಲೆಂದು ಆಶಿಸುತ್ತೇನೆ. ನಮ್ಮ ಸಂಚಿಕೆಗೆ ಲೇಖನಗಳನ್ನು ನೀಡುತ್ತಿರುವವರಿಗೆಲ್ಲಾ ವಂದನೆಗಳು.

ಯುಗಾದಿ ಶುಭಾಶಯಗಳು

ತಮ್ಮವ



■ **ಕೆ.ಸಿ.ನಟರಾಜನ್**
ಸಂಪಾದಕ, 9845113475

Book-Post

To,

_______________

_______________

_______________

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com, Ph : 080-26757159